ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 25 ಜೂನ್ 21, 1981 ಬೆಲೆ : 60 ಪೈಸೆ

ಚುನಾವಣಾ ಫಲಿತಾಂಶ

ಸಂಪಾದಕೀಯ

ಜೂನ್ ಹದಿನಾಲ್ಕರಂದು ನಡೆದ ಉಪಚುನಾವಣೆಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡರಂಗ ಸರಕಾರವು ಆಡಳಿತ ನಡೆಸುತ್ತಿರುವ ಪಶ್ಚಿಮ ಬಂಗಾಳದಲ್ಲಿನ ಫಲಿತಾಂಶವು ದೇಶದ ಉಳಿದೆಡೆಗಳಲ್ಲಿ ಕಾಂಗ್ರೆಸ್ ಸರಕಾರಗಳಿರುವ ರಾಜ್ಯಕ್ಕಿಂತ ತೀರಾ ಭಿನ್ನವಾಗಿದೆ. ಪಶ್ಚಿಮ ಬಂಗಾಳದ ಸೇರಾಮ್‌ಪೋರ್ ಲೋಕಸಭಾ ಕ್ಷೇತ್ರದಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿ ಕಳೆದ ಬಾರಿಗಿಂತಲೂ ಸುಮಾರು ಇಪ್ಪತ್ತು ಸಹಸ್ರಕ್ಕೂ ಹೆಚ್ಚಿನ ಮತಗಳನ್ನು ಪಡೆದು ಗೆದ್ದಿರುವರು. ಈ ರಾಜ್ಯದಲ್ಲಿನ ಎಂಟು ವಿಧಾನಸಭಾ ಕ್ಷೇತ್ರಗಳಿಗೆ ನಡೆದಿರುವ ಉಪಚುನಾವಣೆಯಲ್ಲಿ ಡಾರ್ಜಲಿಂಗ್ ಸೇರಿ ಐದು ಸ್ಥಾನಗಳು ಸಿ. ಪಿ. ಐ. (ಎಂ)ಗೂ ಒಂದು ಸ್ಥಾನ ಎಡರಂಗದ ಬೆಂಬಲಿತ ಸಿ. ಪಿ. ಐ. ಗೂ ಲಭಿಸಿವೆ. ಕೇವಲ ಎರಡು ಕ್ಷೇತ್ರಗಳಲ್ಲಿ ಗೆದ್ದು, ಕಾಂಗ್ರೆಸ್ ತನ್ನ ಎರಡು ಸ್ಥಾನಗಳನ್ನು ಉಳಿಸಿಕೊಂಡಿದೆ. ಆದರೆ ಸಿ. ಪಿ. ಐ. (ಎಂ)ನ ಅಭ್ಯರ್ಥಿಗಳು ಕಳೆದ ಬಾರಿಗಿಂತಲೂ ಹೆಚ್ಚು ಅಂತರದಿಂದ ಗೆದ್ದರೆ, ಕಾಂಗ್ರೆಸ್ ಅಭ್ಯರ್ಥಿಗಳು ಕಳೆದ ಬಾರಿಗಿಂತಲೂ ಕಡಿಮೆ ಅಂತರದಿಂದ ಗೆದ್ದಿರುವರು.

ಉಳಿದೆಡೆಗಳಲ್ಲಿ, ಅಂದರೆ ಕಾಂಗ್ರೆಸ್ ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳೇ (ಎರಡು ವಿಧಾನಸಭಾ ಸ್ಥಾನಗಳು ಸ್ವತಂತ್ರ ಅಭ್ಯರ್ಥಿಗಳಿಗೆ ದೊರೆತುದು ಮತ್ತು ಗರ್‌ವಾಲ್ ಲೋಕಸಭಾ ಕ್ಷೇತ್ರದ ಫಲಿತಾಂಶ ಇನ್ನೂ ಪ್ರಕಟವಾಗದೆ ಇರುವುದನ್ನು ಬಿಟ್ಟರೆ) ಗೆದ್ದಿರುವರು. ಇದಕ್ಕೆ ಮುಖ್ಯ ಕಾರಣ ಈ ರಾಜ್ಯಗಳಲ್ಲಿ ಕಾಂಗ್ರೆಸ್‌ಗೆ ಬದಲಿಯಾಗಿ ಜನತೆಯು ವಿಶ್ವಾಸಪಡೆದಿರುವ ಒಂದು ಪ್ರಗತಿಶೀಲ ಪರ್ಯಾಯವು ಇಲ್ಲದಿರುವುದೇ ಆಗಿದೆ. ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದಿರುವ ಹೆಚ್ಚಿನೆಡೆಗಳಲ್ಲಿ ಮತಕಟ್ಟೆಗೆ ಹೋದ ಜನಸಂಖ್ಯೆ ಬಹಳ ಕಡಿಮೆ. ದೊಡ್ಡ ವಿಭಾಗದ ಜನ ಈ ಚುನಾವಣೆಯಲ್ಲಿ ನಿರಾಸಕ್ತಿ ವಹಿಸಿದ್ದರು. ಉದಾಹರಣೆಗೆ ಅಲಹಾಬಾದ್, ಮಿರ್ಜಾಪುರ್, ಕಟ್ಟಕ್ ಮತ್ತು ಅಮೇಥಿ ಲೋಕಸಭಾ ಕ್ಷೇತ್ರಗಳಲ್ಲಿ ಕ್ರಮವಾಗಿ ಶೇಕಡಾ 26, 28, 40 ಮತ್ತು 40ರಷ್ಟು ಮತ ಚಲಾವಣೆ ಆಗಿದೆಯಷ್ಟೆ. ಆದರೆ ಪಶ್ಚಿಮ ಬಂಗಾಲದಲ್ಲಿ ಶೇ. 50ರಿಂದ 70ರ ತನಕ ಆಗಿದೆ. ಕಾಂಗ್ರೆಸ್ ಗೆದ್ದಿರುವ ಬಹಳಷ್ಟು ಕಡೆ ಚಲಾಯಿತ ಮತಗಳಲ್ಲೂ ಒಟ್ಟು ಬಹುಮತ ಅದಕ್ಕೆ ದೊರೆತಿಲ್ಲ. ಇದಕ್ಕೆ ಕಾರಣ ವಿರೋಧ ಪಕ್ಷಗಳಲ್ಲಿನ ಅನೈಕ್ಯತೆಯೇ ಆಗಿದೆ.

ಕರ್ನಾಟಕ ರಾಜ್ಯದಲ್ಲಿ ನಡೆದ ಧಾರವಾಡ ಗ್ರಾಮಾಂತರ ಪ್ರದೇಶ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆದ್ದಿರುವರು. ವಿರೋಧ ಪಕ್ಷಗಳೊಳಗೆ ಹೊಂದಾಣಿಕೆ ಇದ್ದು, ಎಲ್ಲಾ ಶಕ್ತಿ

(ಕಡೇ ಪುಟ ನೋಡಿ)

ಇಂದಿರಾ ಜಯಭೇರಿಗೆ ಎಡಶಕ್ತಿಗಳಿಂದ ತಡೆ

ಜೂನ್ 14ರಂದು ಮರುಚುನಾವಣೆಗಳನ್ನು ಎದುರಿಸಿದ ಐದು ರಾಜ್ಯಗಳಲ್ಲಿ ಒಂದಾದ ಪಶ್ಚಿಮ ಬಂಗಾಳದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡರಂಗ ಮತ್ತು ಸಿ. ಪಿ. ಐ. ಪಕ್ಷ ಸೇರಿರುವ ಮೈತ್ರಿರಂಗವು ಉಳಿದ ನಾಲ್ಕು ರಾಜ್ಯಗಳಲ್ಲಿ ಇಂದಿರಾ ಕಾಂಗ್ರೆಸ್ಸಿಗೆ ದೊರೆತ ಜಯಭೇರಿಯನ್ನು ಸಂಪೂರ್ಣ ತಡೆಗಟ್ಟಿದೆ. ಮಾತ್ರವಲ್ಲ, ಇಂದಿರಾ ಕಾಂಗ್ರೆಸ್ಸಿಗೆ ನಿಜವಾದ ಸವಾಲನ್ನು ಒಡ್ಡುವುದು ಜನತೆಯ ವಿಶ್ವಾಸ ಪಡೆದಿರುವ ಪ್ರಗತಿಶೀಲ ಪರ್ಯಾಯದಿಂದ ಮಾತ್ರ ಸಾಧ್ಯವೆಂದು ಫಲಿತಾಂಶಗಳು ತೋರಿಸಿಕೊಟ್ಟಿವೆ. ಪಶ್ಚಿಮ ಬಂಗಾಳದಲ್ಲಿ ಸಿ.ಪಿ.ಐ.(ಎಂ) ನೇತೃತ್ವದ ಎಡರಂಗವು 1977ರಲ್ಲಿ ಅಧಿಕಾರಕ್ಕೆ ಬಂದಿರುವಾಗ ಹುಟ್ಟಿಸಿದ ವಿಶ್ವಾಸ ಇನ್ನೂ ಅಳಿದಿಲ್ಲ ಎಂಬುದು ಸ್ಪಷ್ಟವಾಗಿದೆ ಎಂದು ಸಿ. ಪಿ. ಐ. (ಎಂ) ಮುಂದಾಳು ಹಾಗೂ ಎಡರಂಗ ಸಮನ್ವಯ ಸಮಿತಿಯ ಅಧ್ಯಕ್ಷ ಕಾಂ. ಪ್ರಮೋದ್ ದಾಸ್‌ಗುಪ್ತ ಅಭಿಪ್ರಾಯಪಟ್ಟಿರುವರು. ಸಿ. ಪಿ. ಐ. (ಎಂ) ಮತ್ತು ಸಿ.ಪಿ.ಐ. ಮುಂದಾಳುಗಳು ಪಶ್ಚಿಮ ಬಂಗಾಲದಲ್ಲಿನ ಫಲಿತಾಂಶವನ್ನು ಸ್ವಾಗತಿಸುತ್ತಾ, ಅಲ್ಲಿಯ ಜನತೆಯನ್ನು ಅಭಿನಂದಿಸಿರುವರು.

ಇಂದಿರಾ ಕಾಂಗ್ರೆಸ್ ಆಡಳಿತದಲ್ಲಿರುವ ನಾಲ್ಕೂ ರಾಜ್ಯಗಳಲ್ಲಿ ಏನೇನೋ ಕುತಂತ್ರಗಳನ್ನು ನಡೆಸಿ, ಹಣವನ್ನು ಚೆಲ್ಲಿ, ಮತಕಟ್ಟೆಗಳ ಮೇಲೆ ಧಾಳಿ ನಡೆಸಿ ಇನ್ನೇನೋ ಮಾಡಿದರೂ ಎರಡು ಕ್ಷೇತ್ರ (ಅಮೇಥಿ ಲೋಕಸಭಾ ಕ್ಷೇತ್ರ ಮತ್ತು ತಿಂಡವಾರಿ ವಿಧಾನಸಭಾ ಕ್ಷೇತ್ರ)ಗಳನ್ನು ಬಿಟ್ಟರೆ ಉಳಿದ ಹೆಚ್ಚಿನೆಡೆಗಳಲ್ಲೆಲ್ಲಾ ಒಟ್ಟು ಚಲಾಯಿತ ಮತಗಳಲ್ಲಿ ಕಾಂಗ್ರೆಸ್‌ಗೆ ಬಹುಮತವಿಲ್ಲ. ಡೆಮೊಕ್ರಾಟಿಕ್ ಸೋಶಿಯಲಿಸ್ಟ್ ಫ್ರಂಟ್ ಮುಖಂಡ ಬಹುಗುಣ ಸ್ಪರ್ಧಿಸಿರುವ ಗರ್‌ವಾಲ್ ಲೋಕಸಭಾ ಕ್ಷೇತ್ರದ ಮತಗಳ ಎಣಿಕೆಯು ತಡೆಹಿಡಿಯಲ್ಪಟ್ಟಿದೆ. ಗರ್‌ವಾಲ್ ಕ್ಷೇತ್ರ ಮತ್ತು ರಾಜೀವ್‌ಗಾಂಧಿ ಸ್ಪರ್ಧಿಸಿರುವ ಅಮೇಥಿ ಕ್ಷೇತ್ರದಲ್ಲಿ ಕೋಟಿಗಟ್ಟಲೆ ಹಣವನ್ನು ಸುರಿದಿದ್ದು, ಸರಕಾರಿ ಯಂತ್ರವನ್ನು ಸಂಪೂರ್ಣವಾಗಿ ಇಂದಿರಾ ಕಾಂಗ್ರೆಸ್ ಬಳಸಿದೆ. ಪ್ರಮುಖ ವಿರೋಧ ಪಕ್ಷಗಳಾದ ಜನತಾ ಪಕ್ಷ, ಕಾಂಗ್ರೆಸ್ (ಯು), ಭಾ. ಜ. ಪ. ಮತ್ತು ಲೋಕದಳ ಪಕ್ಷಗಳು ಚುನಾವಣೆಯು ಹಣದ ಬಲದಿಂದ ನಡೆದಿದ್ದು, ತುಂಬಾ ಮೋಸ ನಡೆದಿದೆ ಎಂದು ಆಪಾದಿಸಿವೆ.

(ಕಡೇ ಪುಟ ನೋಡಿ)

ಖಾನ್ ಹಗರಣ-ತನಿಖೆಗಾಗಿ ಒತ್ತಾಯಿಸಿ ಪ್ರದರ್ಶನ

ಕಳೆದ ಶನಿವಾರ ಬೆಳಗಿನ ಜಾವ ರಾಜ್ಯಸಭಾ ಸದಸ್ಯ ಎಫ್. ಎಂ. ಖಾನ್ ಕುಡಿದು ಮತ್ತರಾಗಿ ಲಾರಿ ಚಾಲಕನೊಂದಿಗೆ, ಪೋಲೀಸರೊಂದಿಗೆ, ಪೋಲೀಸ್ ಅಧಿಕಾರಿಗಳೊಂದಿಗೆ ಅಸಭ್ಯರಾಗಿ ವರ್ತಿಸಿರುವ ಘಟನೆ ವರದಿಯಾಗಿದೆ.

ಬೆಂಗಳೂರಿನ ಬನ್ನೇರುಘಟ್ಟದ ಬಳಿ ಬಿರ್ಲಾ ಎಸ್ಟೇಟಿನ ಬಂಗಲೆ ಖಾನ್‌ರಂತಹ ರಾಜಕಾರಣಿಗಳ, ಕಪ್ಪುಹಣದ ಖದೀಮರ ರಾತ್ರಿ ಚಟುವಟಿಕೆಯ ಸ್ಥಳವಾಗಿದೆ. ಆ ಬಂಗಲೆಯಿಂದ, ಶನಿವಾರ ಬೆಳಗಿನ ಜಾವ ಕುಡಿದು ಮತ್ತರಾಗಿ ಕಾರಿನಲ್ಲಿ ಖಾನ್ ಮತ್ತು ಇನ್ನಿಬ್ಬರು(ಇಬ್ಬರಲ್ಲಿ ಒಬ್ಬರು ಮಹಿಳೆಯೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ) ನಗರದತ್ತ ಆಗಮಿಸುತ್ತಿದ್ದರು. ಆ ಸಮಯದಲ್ಲಿ ಖಾನ್‌ರ ಕಾರು ಕೈಕೊಟ್ಟಿತು. ಅದೇ ಸಮಯದಲ್ಲಿ ಬನ್ನೇರುಘಟ್ಟ ರಸ್ತೆಯಿಂದ ನಗರದತ್ತ ಆಗಮಿಸುತ್ತಿದ್ದ ಲಾರಿಯೊಂದನ್ನು ಖಾನ್ ತಡೆಹಿಡಿದು ಕಾರನ್ನು ನಗರಕ್ಕೆ ಕೊಂಡಯ್ಯಲು ಆಜ್ಞಾಪಿಸಿದರು. ಅಲ್ಲದೇ ಲಾರೀ ಡ್ರೈವರನನ್ನು ಅಶ್ಲೀಲ ಭಾಷೆಯಲ್ಲಿ ತೆಗಳಲು ತೊಡಗಿದರು. ಕಾರನ್ನು ಲಾರಿಗೆ ಕಟ್ಟಿಕೊಂಡುಹೋಗಲು ನಿರಾಕರಿಸಿದ ಲಾರಿ ಡ್ರೈವರ್ ಮುಹಮ್ಮದ್ ಅಲ್ಲಿ ನಿರಾಕರಿಸಿದ ಕಾರಣ ಅವನಿಗೆ ರಸ್ತೆ ಮಧ್ಯದಲ್ಲೇ ಖಾನ್ ಹೊಡೆದರು. ಅಸಭ್ಯವಾಗಿ ನಿಂದಿಸುತ್ತ ಲಾರಿಯೇರಿ ಕುಳಿತರು. ಕುಡಿದು ಮತ್ತನಾದ ಈ ವ್ಯಕ್ತಿ ಯಾರೋ ದೊಡ್ಡ (?) ಮನುಷ್ಯನಿರಬಹುದೆಂದು ದಣಿಸಿದ ಬಡಪಾಯಿ ಡ್ರೈವರ್ ಏನೂ ತೋಚದೆ ಕಣ್ಣುಬಿಡುತ್ತ ನಿಂತನು.

ಈ ಗಲಾಟೆ ಕೇಳಿ ಗಸ್ತು ತಿರುಗುತ್ತಿದ್ದ ಪೇದೆಗಳಿಬ್ಬರು ಸ್ಥಳಕ್ಕೆ ಆಗಮಿಸಿದರು. ಅವರನ್ನು ನೋಡಿದೊಡನೇ ಲಾರೀ ಚಾಲಕನನ್ನು ಬಂಧಿಸಲು ಖಾನ್ ಸಾಹೇಬರು ಆಜ್ಞಾಪಿಸಿದರು. ನಂತರ ಲಾರಿಯನ್ನು ಖಾನ್‌ರ ಸಮೇತ ಜೆ. ಪಿ. ನಗರ ಪೋಲೀಸ್ ಠಾಣೆಗೆ ಕರೆತರಲಾಯಿತು. ಖಾನ್ ಠಾಣೆಯ ಒಳಗೆ ಧಾವಿಸಿ ತಕ್ಷಣ ಡ್ರೈವರನನ್ನು ಬಂಧಿಸುವಂತೆ ಕೂಗಾಡಿದರು. ಕುಡಿದು ತೂರಾಡುತ್ತಿದ್ದ ಖಾನ್ ಜೊತೆ ವ್ಯವಹರಿಸಲು ಹೆದರಿದ ಪೋಲೀಸರು ಹಿರಿಯ ಅಧಿಕಾರಿಗಳಿಗೆ ವಿಷಯ ತಿಳಿಸಿ ಫೋನ್ ಮಾಡಿದರು. ಇತ್ತ ಖಾನ್‌ರ ಕೂಗಾಟ ನಡೆದೇ ಇತ್ತು. ಫೋನ್‌ಮಾಡುತ್ತಿದ್ದ ಪೇದೆಗೆ, ಡ್ರೈವರನಿಗೆ ಅಲ್ಲಿದ್ದ ಬೆತ್ತದಿಂದ ಪ್ರಹರಿಸುವುದೂ ನಡೆದೇ ಇತ್ತು.

ರಾಜ್ಯದ ಪ್ರಭಾವಿ ವ್ಯಕ್ತಿಯೊಬ್ಬನ ಗಲಾಟೆಯಿಂದ ಆತಂಕಗೊಂಡ ಹಿರಿಯ ಅಧಿಕಾರಿಗಳಾದ ಎ.ಸಿ.ಪಿ. ಮೀರ್ ಅಹ್ಮದ್, ಡಿ.ಸಿ.ಪಿ. ರಾಮಾನುಜು ಮತ್ತು ಕಮೀಷನರ್ ನಿಜಾಮುದ್ದೀನ್ ಸ್ವಯಂ ಠಾಣೆಗೆ ಆಗಮಿಸಿದರು. ಖಾನ್ ಈ ಅಧಿಕಾರಿಗಳನ್ನೆಲ್ಲ ತರಾಟೆಗೆ ತೆಗೆದುಕೊಂಡರು. ಎ.ಸಿ.ಪಿ. ಮೀರ್ ಆಹ್ಮದ್‌ರತ್ತ ಠಾಣೆಯಲ್ಲಿದ್ದ ಕೋವಿಯೊಂದನ್ನೆತ್ತಿ ಉಢಾಯಿಸುವುದಾಗಿ ಖಾನ್ ಬೆದರಿಸಿದರು. ಇದರಿಂದ ಆತಂಕಗೊಂಡ ಕಮೀಷನರ್ ನಿಜಾಮುದ್ದೀನ್ ಖಾನ್‌ರನ್ನು ಸಮಾಧಾನಪಡಿಸಲು ಯತ್ನಿಸಿದಾಗ ಅವರ ಕುತ್ತಿಗೆಪಟ್ಟಿಯನ್ನು ಹಿಡಿದು ಕೆನ್ನೆಗೆ ಬಾರಿಸಿ, ಮುಖಕ್ಕೆ ಉಗಿದರೆಂದು ವರದಿಯಾಗಿದೆ. ಕಾರ್ಮಿಕರೊಂದಿಗೆ, ಕಾರ್ಮಿಕ ನಾಯಕರೊಂದಿಗೆ ಹೀನಾಮಾನವಾಗಿ ವರ್ತಿಸುವ ಈ ಕಮೀಷನರ್ ಮಹಾಶಯ ಖಾನ್‌ರಿಂದ ಅಪಮಾನಗೊಂಡರೂ ತುಟಿಬಿಚ್ಚಲಿಲ್ಲ. ನಿಜಾಮುದ್ದೀನರಿಗೆ ದೊರೆತ ಕಮೀಷನರ್ ಪದವಿ ಖಾನ್‌ರ ದಯಾಭಿಕ್ಷೆಯೇ ಏನೋ ?

ಅಂತೂ ಕೊನೆಗೆ ಖಾನ್ ಮಹಾಶಯರನ್ನು ಸಮಾಧಾನಪಡಿಸಿ ಪೋಲೀಸರ ಜೀಪಿನಲ್ಲೇ ಅವರ ಮನೆಗೆ ತಲುಪಿಸಲಾಯಿತು. ಖಾನ್‌ರು ಕುಳಿತ ಜೀಪಿನ ಹಿಂದೆ ಎರಡು ಮೆಟಡೋರ್ ವಾಹನಗಳು, ಒಂದೊಂದರಲ್ಲಿ ಆರು ಪೋಲೀಸರು, ವೈರಲಸ್ ಉಪಕರಣ, ಅಶ್ರುವಾಯು ಮತ್ತು ಲಾಠಿಗಳು. ಪ್ರತಿ ವಾಹನದಲ್ಲಿ ಇಬ್ಬರು ಪೇದೆಗಳ ಬಳಿ ಕೋವಿ...ಹೀಗೆ ಸಾಗಿತ್ತು ಮೆರವಣಿಗೆ.

ಈ ಘಟನೆ ಕುರಿತು ಪೋಲೀಸ್ ಅಧಿಕಾರಿಗಳು ಪರಸ್ಪರ ಭಿನ್ನಭಿನ್ನವಾಗಿ ಹೇಳುತ್ತಾರೆ. ನಿಜಾಮುದ್ದೀನರಂತೂ ಘಟನೆಯನ್ನೇ ಅಲ್ಲಗಳೆದಿದ್ದಾರೆ. ಏನೂ ನಡೆದೇ ಇಲ್ಲವೆನ್ನುವಂತೆ ಪೋಲೀಸ್ ಇಲಾಖೆ ಹಗರಣ ಮುಚ್ಚಿಡಲು ಯತ್ನಿಸುತ್ತಿರುವುದು ನಾಚಿಕೆಗೇಡಿನ ವಿಷಯ.

(ಕಡೇ ಪುಟ ನೋಡಿ)

ಜಮಾತ್-ಇ-ಇಸ್ಲಾಮಿ - ಮುಸಲ್ಮಾನರಲ್ಲಿ ಆರ್.ಎಸ್.ಎಸ್. ಪಡಿರೂಪ

[ಕಾಂ. ಹರಿಕಿಷನ್ ಸಿಂಗ್ ಸುರ್ಜಿತರ "ವಿವಿಧ ವೇಷಗಳಲ್ಲಿ ಕೋಮುವಾದಿ ಶಕ್ತಿಗಳು" ಎಂಬ ಲೇಖನಮಾಲೆಯ ಮೂರನೇ ಲೇಖನ]

ಧಾರ್ಮಿಕ ಮೂಲತತ್ವವಾದದ ಹೆಸರಿನಲ್ಲಿ ರಾಷ್ಟ್ರೀಯ ಚಳುವಳಿಯನ್ನು ಮುರಿಯಲು ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿಗಳನ್ನು ರಕ್ಷಿಸಲು 1940-41 ರಷ್ಟು ಹಿಂದೆಯೇ ಜಮಾತ್-ಇ-ಇಸ್ಲಾಮಿ ಅಸ್ತಿತ್ವಕ್ಕೆ ಬಂದರೂ ಕಳೆದ 4-5 ವರ್ಷಗಳಲ್ಲಿ ತನ್ನ ಚಟುವಟಿಕೆಗಳನ್ನು ತೀವ್ರಗೊಳಿಸಿದೆ.

ಪಾಕೀಸ್ತಾನದಲ್ಲಿ ಎಲ್ಲಿ ಪ್ರಜಾಪ್ರಭುತ್ವ ತತ್ವಗಳನ್ನು ಗಾಳಿಗೆ ತೂರಿರುವ, ಜಿಯಾ-ಉಲ್-ಹಕ್‌ನ ಮಿಲಿಟರಿ ಸರ್ವಾಧಿಕಾರಕ್ಕೆ ಜಮಾತ್ ಬೆಂಬಲಕೊಟ್ಟಿದೆ. ಭುಟ್ಟೋನನ್ನು ನೇಣುಹಾಕಿದ್ದನ್ನು ಬಹಿರಂಗವಾಗಿ ಬೆಂಬಲಿಸಿದ ಮತ್ತು ಆ ಸಂದರ್ಭದಲ್ಲಿ ಭಾರತದಲ್ಲಿ ಸಿಹಿಹಂಚಿದ ಈ ಸಂಸ್ಥೆ ಮುಸಲ್ಮಾನರನ್ನು ಒಳಗೊಂಡಂತೆ ಲಕ್ಷಾಂತರ ಸ್ವಾತಂತ್ರ್ಯಪ್ರೇಮಿಗಳ ಭಾವನೆಗಳನ್ನು ನೋಯಿಸಿದೆ.

ಬಾಂಗ್ಲಾ ದೇಶದ ವಿಮೋಚನಾ ಹೋರಾಟವನ್ನು ವಿರೋಧಿಸಿದ ಈ ಸಂಸ್ಥೆ ಈಗ ಅಲ್ಲಿನ ಮಿಲಿಟರಿ ಆಡಳಿತಕ್ಕೆ ಬೆಂಬಲ ನೀಡುತ್ತಿದೆ.

ಹೈದ್ರಾಬಾದ್ ಸಮ್ಮೇಳನ

ಜಮಾತ್ ಇತ್ತೀಚೆಗೆ ಮಾರ್ಚ್ ತಿಂಗಳಿನಲ್ಲಿ ತನ್ನ ಆರನೆಯ ಸಮ್ಮೇಳನವನ್ನು ಹೈದ್ರಾಬಾದ್‌ನಲ್ಲಿ ನಡೆಸಿತು. ವಿಚ್ಛಿದ್ರಕಾರಿ ಚಟುವಟಿಕೆಗಳಿಗೆ ಹೆಸರಾಗಿರುವ ಈ ಸಂಸ್ಥೆಯ ಸಮ್ಮೇಳನ ಭಾರತವಲ್ಲದೆ ವಿದೇಶಗಳಲ್ಲೂ ಆಸಕ್ತಿಯನ್ನುಂಟುಮಾಡಿತ್ತು. ಮುಸ್ಲಿಂ ಜನರಿರುವ ಎಲ್ಲ ದೇಶಗಳಿಂದ ಈ ಸಮ್ಮೇಳನಕ್ಕೆ ನಿಯೋಗಗಳು ಬಂದಿದ್ದವು. ಅಮೇರಿಕಾ ಪರವಿರುವ ಮುಸ್ಲಿಂ ದೇಶಗಳು ಈ ಸಮ್ಮೇಳನದ ಯಶಸ್ಸನ್ನು ಹಾರೈಸಿದ್ದು ಗಮನಾರ್ಹ ಸಂಗತಿ. ಸಂದೇಶ ಕಳಿಸಿದವರಲ್ಲಿ ಸೌದಿ ಅರೇಬಿಯಾದ ಖಲೀದ್, ಜೋರ್ಡಾನ್‌ನ ಹುಸೇನ್ ಪ್ರಮುಖರು. ಭಾರತದ ಪ್ರಧಾನಿ ಇಂದಿರಾ ಕೂಡಾ ಸಂದೇಶ ಕಳಿಸಿದ್ದಾರೆ. ಈ ಸಮ್ಮೇಳನ ಚರ್ಚಿಸಿರುವ ಮತ್ತು ತೆಗೆದುಕೊಂಡಿರುವ ನಿರ್ಧಾರಗಳನ್ನು ಪ್ರಜಾಪ್ರಭುತ್ವ ಶಕ್ತಿಗಳು ಅಲಕ್ಷಿಸುವಂತಿಲ್ಲ.

ತನ್ನ ಪ್ರಜೆಗಳನ್ನು ನಿರಂತರ ಬಡತನ ಮತ್ತು ನಿರಕ್ಷರಿಗಳನ್ನಾಗಿ ಇಟ್ಟಿರುವ ಜನವಿರೋಧಿ ಮುಸ್ಲಿಂ ದೇಶಗಳನ್ನು ಇಸ್ಲಾಂ ಹೆಸರಿನಲ್ಲಿ ಸಮ್ಮೇಳನ ಕೊಂಡಾಡಿದೆ. ಇಸ್ಲಾಮಿಕ್ ರಾಜ್ಯಗಳ ಸಂಘಟನೆಯ ಅಡಿಯಲ್ಲಿ ಈ ದೇಶಗಳನ್ನು ಸಂಘಟಿಸಲು ಕರೆ ನೀಡಿದೆ. ಮೂರನೇ ಜಗತ್ತಿನ ದೇಶಗಳ ಐಕ್ಯತೆಯನ್ನು ಮುರಿಯುವುದಲ್ಲದೆ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಆಸಕ್ತಿಗಳನ್ನು ರಕ್ಷಿಸುವಲ್ಲಿ ಸಮ್ಮೇಳನ ಮುಂದಾಗಿದೆ. ಪ್ಯಾಲೆಸ್ಟೀನಿಯನ್ ವಿಮೋಚನಾ ಹೋರಾಟವನ್ನು ಹತ್ತಿಕ್ಕುತ್ತಿರುವಾಗ ಮತ್ತು ಅರಬ್ ಜನತೆಯ ಐಕ್ಯತೆಯನ್ನು ಮುರಿಯುವ ಕ್ಯಾಂಪ್‌ಡೇವಿಡ್ ಒಪ್ಪಂದವನ್ನು ಅರಬ್ ಜನತೆಯ ಮೇಲೆ ಹೇರುತ್ತಿರುವಾಗ ಇಸ್ಲಾಮಿಕ್ ರಾಜ್ಯಗಳ ಸಂಘಟನೆಯ ಬಗ್ಗೆ ಸಮ್ಮೇಳನ ಮಾತನಾಡಿದೆ.

ಈ ಸಮ್ಮೇಳನವನ್ನು ಆರು ವರ್ಷಗಳ ನಂತರ ಕರೆಯಲಾಗಿದೆ. ಸಮ್ಮೇಳನದ ಉದ್ದಕ್ಕೂ ಸಾಮ್ರಾಜ್ಯಶಾಹಿ ದೇಶಗಳ ಸ್ನೇಹಕ್ಕೆ ಒತ್ತಾಯಿಸುವುದು ಮತ್ತು ಕೊಲೆಗಡುಕ ಜಿಯಾ-ಉಲ್-ಹಕ್‌ನ ಗುಣಗಾನ ಮಾಡುವುದು ನಡೆಯಿತು.

ಶೋಷಕರ ಅನುಚರರು

ಈ ಸಮ್ಮೇಳನವು ಈಗಾಗಲೇ ಬೆಳೆದಿರುವ ಹಿಂದೂ ಜಾತೀಯವಾದಿಗಳ ಹಿಂದೂ ರಾಷ್ಟ್ರ ಘೋಷಣೆಗೆ ಕುಮ್ಮಕ್ಕು ಕೊಡುತ್ತದೆ. ಜಮಾತ್‌ನ ಚಟುವಟಿಕೆಗಳಿಂದ ಆರ್. ಎಸ್. ಎಸ್.ಗೆ ಹೆಚ್ಚು ಬಲಬರುವುದಲ್ಲದೆ ಜಾತೀಯ ವಿಭಜನೆಯಿಂದ ಹಿಂದೂ ಮುಸಲ್ಮಾನರ ಐಕ್ಯಹೋರಾಟ ವಿಫಲವಾಗುತ್ತದೆ. ಸಮ್ಮೇಳನದ ಉದ್ದೇಶ ಮುಸಲ್ಮಾನರನ್ನು ಐಕ್ಯಹೋರಾಟದಿಂದ ಪ್ರತ್ಯೇಕಿಸುವುದು. ಮುಸಲ್ಮಾನರಲ್ಲಿರುವ ಬಡತನ ಹಿಂದುಳಿದಿರುವಿಕೆ ಮತ್ತು ಅವರ ಪ್ರಗತಿ ಮುಂತಾದವುಗಳನ್ನು ಕೇವಲ ಅವರನ್ನು ಹಾದಿತಪ್ಪಿಸಲು ಉಪಯೋಗಿಸಿಕೊಳ್ಳಲಾಗಿದೆ.

ಮುಸ್ಲಿಂರಲ್ಲಿ ಅತಿಹೆಚ್ಚು ಜನರು ಕೈಗಾರಿಕಾ ಕಾರ್ಮಿಕರು, ಕೃಷಿಕೂಲಿ, ಸಣ್ಣರೈತರು, ಕರಕುಶಲಿಗಳು ಮುಂತಾದವರಿದ್ದು ಅವರ ಪ್ರಗತಿ ಇತರ ಧರ್ಮಗಳ ಕಾರ್ಮಿಕ, ಕರಕುಶಲಿ, ಮತ್ತು ಸಣ್ಣರೈತರ ಜೊತೆ ನಿಕಟ ಸಂಬಂಧಹೊಂದಿದೆ. ಮತ್ತು ಇವರುಗಳ ಹಕ್ಕುಗಳನ್ನು ಐಕ್ಯಹೋರಾಟದಿಂದ ಮಾತ್ರ ರಕ್ಷಿಸಿಕೊಳ್ಳಲು ಸಾಧ್ಯ. ಆದರೆ ಸಮ್ಮೇಳನದಲ್ಲಿ ಮಾಡಿದ ಚರ್ಚೆಗಳನ್ನು ಪರಿಶೀಲಿಸಿದರೆ ದುಡಿಯುವ ವರ್ಗದ ಕಲ್ಯಾಣದ ಬಗ್ಗೆ ಸಂಘಟಕರಿಗೆ ಕಾಳಜಿ ಇಲ್ಲದಿರುವುದನ್ನು ಹೇಳುತ್ತವೆ.

ಇಸ್ಲಾಮಿಕ್ ಘೋಷಣೆಗಳು

ತನ್ನ ಗೊತ್ತುವಳಿಗಳಲ್ಲಿ ಈ ಅಂಶಗಳನ್ನು ಸ್ಪಷ್ಟಪಡಿಸಿದೆ.

1. ಇಸ್ಲಾಮಿಕ್ ರಾಷ್ಟ್ರಗಳ ಸಂಘಟನೆಯು ಮುಸ್ಲಿಂ ದೇಶಗಳಿಗೆ ಸರಿಯಾದ ಪ್ರಗತಿಪಥವನ್ನು ತೋರುತ್ತಿದೆ.

2. ಭಾರತೀಯ ಮುಸಲ್ಮಾನರ ವಿಮೋಚನೆ ಷರೀಯತ್, ಇಸ್ಲಾಮಿಕ್ ಕಾನೂನುಗಳ ಅನುಚರಣೆಯಲ್ಲಿದೆ.

3. ಎಲ್ಲರಂಗಗಳಲ್ಲೂ ಮುಸಲ್ಮಾನರು ಪ್ರತ್ಯೇಕ ಸಂಘಟನೆಗಳನ್ನು ಹೊಂದಿರಬೇಕು. ಮತ್ತು ಅಂತಹ ಚಟುವಟಿಕೆಗಳನ್ನು ತೀವ್ರಗೊಳಿಸಬೇಕು.

ಇವು ಜಮಾತ್‌ನ ಉದ್ದೇಶಗಳನ್ನು ನಿಚ್ಚಳಗೊಳಿಸುತ್ತವೆ. ಕಳೆದ ವರ್ಷ ಪ್ಯಾಲೆಸ್ಟೈನ್ ವಿಮೋಚನಾ ಚಳುವಳಿಯ ನಾಯಕ ಯಾಸೆರ್ ಅರಾಫತ್ ಇಂಡಿಯಾಕ್ಕೆ ಬಂದಾಗ ವಿರೋಧಿ ಪ್ರದರ್ಶನ ನಡೆಸಿತು. ಜಮ್ಮಾತ್ ಸಾಮ್ರಾಜ್ಯಶಾಹಿ ಮತ್ತು ಪ್ರತೀಗಾಮಿಗಳ ಸೇವೆಯಲ್ಲಿದೆ ಎನ್ನುವುದಕ್ಕೆ ಬೇರೆ ಇನ್ನೇನು ಕಾರಣ ಬೇಕು? ಅರಬ್ ರಾಷ್ಟ್ರಗಳಿಂದ ಈ ಸಂಘಟನೆಗೆ ಹಣ ಬರುತ್ತಿರುವುದನ್ನು ಪಾರ್ಲಿಮೆಂಟಿನಲ್ಲಿ ಗೃಹ ಸಚಿವರು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ದೃಢಪಡಿಸಿದರು. ಜಮ್ಮಾತ್ ಮತ್ತು ಆರ್.ಎಸ್.ಎಸ್.ನ ಘೋಷಣೆಗಳು ಮುಸ್ಲಿಂ ಮತ್ತು ಹಿಂದೂ ಜಾತೀಯ ಭಾವನೆಗಳನ್ನು ಕೆಣಕುವುದರಲ್ಲಿ ಒಂದೇ ಆಗಿದೆ.

ಮೊದಲಿನಿಂದಲೂ ಪ್ರತಿಗಾಮಿಗಳು

ಜಮ್ಮಾತ್ ಮೊದಲಿನಿಂದಲೂ ಪ್ರತೀಗಾಮಿ ಧೋರಣೆ ಹೊಂದಿರುವುದು ಅದರ ಸಾಹಿತ್ಯದಿಂದ ಕಂಡುಬರುತ್ತದೆ.

ಜಮಾತ್‌ನ ಉದ್ಘಾಟನಾ ಸಮ್ಮೇಳನವು ಆಗಸ್ಟ್ 26, 1946ರಂದು ಪಂಜಾಬ್‌ನ ಪಠಾಣ್‌ಕೋಟ್‌ನಲ್ಲಿ ಮೌಲಾನಾ ಅಬ್ದುಲ್ ಆಲಾ ಮೌದೂದಿಯ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಸ್ಥಾಪನಾ ಸಮ್ಮೇಳನದಲ್ಲಿ ಕೇವಲ 70 ಜನ ಭಾಗವಹಿಸಿದ್ದರು. ಬೇರೆ ಎಲ್ಲ ಸಂಘಟನೆಗಳು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರೆ ಜಮಾತ್ ಮುಸ್ಲಿಂರನ್ನು ಪ್ರತ್ಯೇಕವಾಗಿರುವುದರಲ್ಲಿ ತೊಡಗಿತ್ತು. ತನ್ನ ಪುಸ್ತಕ ಕಾವುದೆ-ಜಮಾತ್-ಇ-ಇಸ್ಲಾಮಿದಲ್ಲಿ ರಾಷ್ಟ್ರೀಯ ಶರತ್ತುಗಳನ್ನು ಮೀರಿ ಮಾನವೀಯ ಮೌಲ್ಯಗಳಿಗಾಗಿ ಕೆಲಸಮಾಡುವುದಾಗಿ ಹೇಳಿದೆ. ತನ್ನ ನಂಬಿಕೆಗುರಿ ಮತ್ತು ವಿಧಾನಗಳು ಇಸ್ಲಾಂ ಸಂಪ್ರದಾಯಕ್ಕನುಗುಣವಾಗಿದ್ದು ದೈನಂದಿನ ಸಮಸ್ಯೆಗಳು ತಮಗೆ ಮುಖ್ಯವಲ್ಲವೆಂದು ಹೇಳಿದೆ. ವಿವಿಧ ರಾಜಕೀಯ ಪಕ್ಷಗಳಿಂದ ದೂರವಿರುವಂತೆ ತನ್ನ ಸದಸ್ಯರಿಗೆ ಹೇಳುತ್ತದೆ.

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸದಂತೆ ಮುಸ್ಲಿಂರಿಗೆ ಕರೆಕೊಟ್ಟಿತ್ತು. ಅಲ್ಲದೆ ಜಾತ್ಯಾತೀತತೆ, ಪ್ರಜಾಪ್ರಭುತ್ವ ಮತ್ತು ಸಮಾಜವಾದಗಳ ವಿರುದ್ಧ ಪ್ರಚಾರ ಸಮರದಲ್ಲಿ ತೊಡಗಿತ್ತು.

ಸ್ವಾತಂತ್ರ್ಯ ಸಂಗ್ರಾಮದ ವಿರೋಧಿ

ಒಬ್ಬ ಮುಸ್ಲಿಂ ಏಕಕಾಲಕ್ಕೆ ದೇಶಪ್ರೇಮಿ, ಸಮಾಜವಾದಿ ಮತ್ತು ಮುಸ್ಲಿಂನಾಗಿರುವುದನ್ನು ಮೌಲಾನಾ ಮೌದೂದಿ ಒಪ್ಪಿಕೊಳ್ಳಲೇ ಇಲ್ಲ. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಮುಸ್ಲಿಂರನ್ನು ಕುರಿತು ಹೀಗೆ ಹೇಳಿದ್ದಾನೆ. "ಈ ಬಡಪಾಯಿಗಳಿಗೆ ಇಸ್ಲಾಂನ ನಿಲುವು ಗೊತ್ತಿಲ್ಲ ಅಥವಾ ಬೇರೆ ಮತಧರ್ಮಗಳ ಪ್ರಥಮ ಪಾಠಗಳೂ ಗೊತ್ತಿಲ್ಲ ಇಲ್ಲವೇ ಯಾವುದರ ಬಗ್ಗೆಯೂ ಏನೊಂದೂ ಗೊತ್ತಿಲ್ಲ". ಒಬ್ಬ ಮುಸ್ಲಿಂ ಮುಸ್ಲಿಂನಲ್ಲದೆ ಬೇರೆ ಆಗಿರಲು ಸಾಧ್ಯವಿಲ್ಲ. ಒಂದು ವೇಳೆ ಬೇರೆ ಕೂಡ ಆಗಿದ್ದರೆ ಅವನು ಪ್ರವಾದಿ ಮೊಹಮ್ಮದ್ ಹೇಳಿದಂತ ಮುಸ್ಲಿಂನಲ್ಲ.

ಮೌದೂದಿ ಪ್ರಕಾರ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಎಲ್ಲ ಮುಸ್ಲಿಂ ಉಲೇಮಗಳು ಮತ್ತು ನಾಯಕರು ಇಸ್ಲಾಂನಿಂದ ಹೊರಗುಳಿಯುತ್ತಾರೆ. ಅವನು ಎಲ್ಲಿಯವರೆಗೆ ಹೋದನೆಂದರೆ ಸ್ವಾತಂತ್ರ್ಯ ಕಲ್ಪನೆಯೇ ಇಸ್ಲಾಂ ವಿರೋಧಿ ಎಂದು ಕರೆದ.

ಮೌದೂದಿಯ ಈ ವಿಚಾರಧಾರೆ ಆರ್.ಎಸ್.ಎಸ್.ನ ಗುರು ಗೋಲ್ವಾಲ್ಕರ್‌ನ ವಿಚಾರಗಳ ಜೊತೆ ವಿಚಿತ್ರ ಹೋಲಿಕೆ ಪಡೆದಿದೆ. ಇಬ್ಬರೂ ಹಿಟ್ಲರ್‌ನ ಕಟ್ಟಾ ಅಭಿಮಾನಿಗಳು!

ಪಾಕೀಸ್ಥಾನ ಸಂವಿಧಾನ ರಚನಾ ಸಭೆಯಲ್ಲಿ ಭೂಸುಧಾರಣಾ ಅಂಶ ಚರ್ಚೆಗೆ ಬಂದಾಗ ತೀವ್ರವಾಗಿ ವಿರೋಧಿಸಿದ. "ಭೂಮಾಲಿಕತ್ವವನ್ನು ಯಾರು ವಿರೋಧಿಸುತ್ತಾರೋ ಮತ್ತು ಅದರ ರದ್ದತಿಗಾಗಿ ಒತ್ತಾಯಿಸುತ್ತಾರೋ ಅಂತಹವರು ಇಸ್ಲಾಮಿಕ್ ಕಾನೂನಿನ ಚೌಕಟ್ಟಿನ ಹೊರಗೆ ಕೆಲಸ ಮಾಡುತ್ತಿರುತ್ತಾರೆ! ಎಂದು ಹೇಳಿದ್ದಾನೆ.

ಇಸ್ಲಾಮಿಕ್ ರಾಜ್ಯದಲ್ಲಿ ಯುದ್ಧ ಕೈದಿಗಳನ್ನು ಮತ್ತು ಸ್ತ್ರೀಯರನ್ನು ನಡೆಸಿಕೊಳ್ಳುವ ಬಗ್ಗೆ ಅವನ ವಿಚಾರ ಹೀಗಿದೆ. "ಯುದ್ಧ ಕೈದಿಗಳನ್ನು ಗುಲಾಮರನ್ನಾಗಿ ಮತ್ತು ಸ್ತ್ರೀಯರನ್ನು ಸೂಳೆಯರನ್ನಾಗಿ ಬಳಸಿಕೊಳ್ಳುವುದು ಇಸ್ಲಾಂ ಮತ್ತು ಷರೀಯತ್ ಕಾನೂನಿನ ಒಂದು ಭಾಗವೇ ಆಗಿದೆ. ಮತ್ತು ಇಸ್ಲಾಂ ಧರ್ಮಕ್ಕೆ ಅಂತಹವುಗಳ ಬಗ್ಗೆ ಹೆಮ್ಮೆ ಇದೆ".

ಮೌಲಾನ ಮೌದೂದಿ ಕಾಂಗ್ರೆಸ್ಸನ್ನು ವಿರೋಧಿಸಿದ್ದು ಅದು ಹಿಂದೂ ರಾಷ್ಟ್ರೀಯತೆಯನ್ನು ಪ್ರತಿನಿಧಿಸುತ್ತದೆ ಎಂದು. ಪ್ರಜಾಪ್ರಭುತ್ವ ಮಾದರಿ ಸರ್ಕಾರವನ್ನು ವಿರೋಧಿಸಿದ್ದಲ್ಲದೆ, ಜಾತ್ಯಾತೀತ ಸಮಾಜವನ್ನು ದೈವ ವಿರೋಧಿಯೆಂದು ಜರಿದ.

ಜಾತ್ಯಾತೀತತೆ ಬಗ್ಗೆ ಹೀಗೆ ಹೇಳಿದ್ದಾನೆ. "ದೈವಿಕತೆಯಿಂದ ಪ್ರತ್ಯೇಕಗೊಂಡ ಮಾನವ ಜೀವನದ ಯಾವುದೇ ಅಂಶ ಸೈತಾನನೊಂದಿಗೆ ಸಂಬಂಧ ಹೊಂದಿರುತ್ತದೆ. ಮನುಷ್ಯನಿಗೆ ವ್ಯಯುಕ್ತಿಕ ಜೀವನವೆಂಬುದಿಲ್ಲ. ಮಾನವ ಸಾಮಾಜಿಕ ಜೀವಿಯಾಗಿದ್ದು ಅವನ ಇಡೀ ಜೀವನ ಸಮುದಾಯಿಕ ಜೀವನವಾಗಿರುತ್ತದೆ. ಯಾವುದೇ ವ್ಯಕ್ತಿ, ಗುಂಪು, ಸಮಾಜ ಜಾತ್ಯಾತೀತತೆ ಅಥವಾ ಭೌತಿಕ ತತ್ವವನ್ನು ಆಧರಿಸಿದರೆ ಅವರುಗಳು ಕೀಳು ಕಾಮನೆಗಳ ಗುಲಾಮರಾಗುತ್ತಾರೆ".

ಪಾಕೀಸ್ತಾನಕ್ಕೆ ಬೆಂಬಲ

1940-41ರಲ್ಲಿ ಪಾಕೀಸ್ಥಾನದ ಸ್ವತಂತ್ರ ಅಸ್ತಿತ್ವವನ್ನು ಬೆಂಬಲಿಸಿದ. ಸ್ವತಂತ್ರ ಇಸ್ಲಾಮಿಕ್ ರಾಜ್ಯದ ಸ್ಥಾಪನೆ ಇಸ್ಲಾಂನ ವಿಚಾರಗಳಿಗೆ ಅನುಗುಣವಾಗಿದೆ. ಭಾರತದಲ್ಲಿ ಮುಸಲ್ಮಾನರು ಎರಡನೇ ದರ್ಜೆ ಪ್ರಜೆಗಳಾದರೂ ಸರಿ. ಭಾರತದಲ್ಲಿ ಮನುಧರ್ಮವನ್ನು ಆದರಿಸಿದ ಸರ್ಕಾರವಿದ್ದು ಮುಸಲ್ಮಾನರನ್ನು ಅಸ್ಪೃಶ್ಯರಂತೆ ಕಂಡರೂ ಅಥವಾ ಪೌರತ್ವ ಹಕ್ಕುಗಳು ದೊರೆಯದಿದ್ದರೂ ನನ್ನ ಯಾವುದೇ ತಕರಾರಿಲ್ಲವೆಂದ. ವೈಯುಕ್ತಿಕವಾಗಿ ಉಪಖಂಡದ ಭಾರತ ಪ್ರದೇಶದಲ್ಲಿದ್ದರೂ ಪಾಕೀಸ್ಥಾನದಲ್ಲಿ ನೆಲೆಯೂರಿದ.

ಜಮಾತ್‌ನ ಗುರಿಗಳು

ದೇಶವು ವಿಭಜನೆಗೊಂಡ ನಂತರ ಜಮಾತ್ ಕೂಡ ಇಬ್ಭಾಗವಾಯಿತು. ಭಾರತದಲ್ಲಿ ಮೌಲಾನ ಅಬ್ದುಲ್ ಲಾಯಿಸ್ ಇಲ್ಲಾನಾ ಜಮಾತ್‌ನ ಮುಖಂಡನಾದ. ಅದರ ಗುರಿಗಳನ್ನು ಹೀಗೆ ಘೋಷಿಸಲಾಗಿದೆ. ಪ್ರಕೃತಿ ನಿಯಮಗಳನ್ನಾಧರಿಸಿ ಮಾನವ ಜೀವನದ ಎಲ್ಲ ಅಂಶಗಳನ್ನು ಒಳಗೊಳ್ಳುವಂತೆ ಇಸ್ಲಾಂನ್ನು ಬಲಪಡಿಸುವುದು ಆದರೆ ಈ ತತ್ವಗಳಿಗೂ ರಾಷ್ಟ್ರಪ್ರೇಮ ರಾಷ್ಟ್ರೀಯತೆಗೂ ಏನೂ ಸಂಬಂಧವಿಲ್ಲ. ಮುಸ್ಲಿಂರಿಗೆ ಯಾವುದೇ ಹಕ್ಕುಗಳನ್ನು ಕೊಡಬಾರದೆಂಬ ಆರ್. ಎಸ್. ಎಸ್. ನ ವಿಚಾರಗಳನ್ನೇ ಪರೋಕ್ಷವಾಗಿ ಇದು ಒಪ್ಪಿಕೊಂಡಂತಾಗುತ್ತದೆ. 1952ರ ತನ್ನ ರಾಮಪುರ ಸಮಾವೇಶದಲ್ಲಿ ಮೌಲಾನಾ ಲ್ಯಾಸ್ ಘೋಷಿಸಿದ 'ರಾಷ್ಟ್ರೀಯತೆ ಮತ್ತು ದೇಶಪ್ರೇಮ ಮಾನವ ಕುಲಕ್ಕೇ ಕಂಟಕವಾಗಿದೆ. ಅವು ಧರ್ಮ, ನೈತಿಕತೆ ಮತ್ತು ಭೌತಿಕ ಜೀವನವನ್ನು ಧ್ವಂಸಗೊಳಿಸಿವೆ.

(ಕಡೇ ಪುಟ ನೋಡಿ)

ಚೀನೀ ವಿದೇಶ ಮಂತ್ರಿಯ ಮುಂಬರುವ ಭೇಟಿಯ ಕುರಿತು

(ಹಿಂದಿನ ಸಂಚಿಕೆಯಿಂದ)

ನಮ್ಮ ಒತ್ತು ಎಲ್ಲಿ

ಹಲವು ಬೂರ್ಜ್ವಾ ರಾಜಕಾರಣಿಗಳು ಹಾಗೂ ಪತ್ರಿಕಾಕರ್ತರಂತೆ ಲಂಗುಲಗಾಮಿಲ್ಲದೆ ಮಾತುಕತೆಗಳ ವಿವರದ ಚರ್ಚೆಗೆ ತೊಡಗುವುದು ಪರಿಹಾರಗಳನ್ನು ಒಂದೊಂದಾಗಿ ಸೂಚಿಸುವುದು ನಮ್ಮ ಕೆಲಸವಲ್ಲ. ಗಡಿವಿವಾದದ ಬಗ್ಗೆ ನಡೆಯಲಿರುವ ಸೂಕ್ಷ್ಮ ಸ್ವರೂಪದ ಮಾತುಕತೆಗಳ ಮೊದಲು ಸಲಹೆ, ಪ್ರಸ್ತಾಪ ಅಥವಾ ಉಪಾಯಗಳನ್ನು ಸೂಚಿಸುವುದರಲ್ಲಿ ನಮಗೆ ನಂಬಿಕೆಯಿಲ್ಲ. ಆದರೆ ಒಂದು ಅಂಶವನ್ನು ಒತ್ತಿ ಹೇಳುವುದು ನಮ್ಮ ಕರ್ತವ್ಯ ಎಂದು ತಿಳಿದಿದ್ದೇವೆ. ಅದೇನೆಂದರೆ, ಭಾರತ ಮತ್ತು ಚೀನಾ ನಡುವಿನ ಸಂಬಂಧಗಳನ್ನು ಸಾಮಾನ್ಯಗೊಳಿಸುವುದು ಅತೀ ತುರ್ತಿನ ಹಾಗೂ ಅಗತ್ಯದ ಕೆಲಸ ಮತ್ತು ಗಡಿವಿವಾದವೂ ಸೇರಿದಂತೆ ಎಲ್ಲಾ ವಿವಾದಾಸ್ಪದ ವಿಷಯಗಳನ್ನು ಇಬ್ಬರಿಗೂ ಒಪ್ಪಿಗೆಯಾಗುವಂತೆ ಇತ್ಯರ್ಥಗೊಳಿಸಲೇಬೇಕೆಂಬ ದೃಢನಿರ್ಧಾರದಿಂದ ಮಾತುಕತೆ ಆರಂಭಿಸುವುದು ಅಗತ್ಯ.

ವಿವಾದಾಸ್ಪದವಾದ ಈ "ಠಾಣೆ", ಆ "ಪರ್ವತ ಕಣಿವೆ", ಮತ್ತೊಂದು "ಮೊರಡಿ" ದೇಶದ ರಕ್ಷಣೆಗೆ ಸೈನಿಕ ದೃಷ್ಟಿಯಿಂದ ಅತೀ ಮಹತ್ವದ್ದು ಒಂದಲ್ಲ ಒಂದು ಕಾರಣಕ್ಕಾಗಿ ಎರಡೂ ಕಡೆಯವರಿಗೆ ಗಡಿವಿವಾದವನ್ನು ಪರಿಹರಿಸುವುದು ಕಷ್ಟಸಾಧ್ಯವೆಂದು ಕಂಡುಬಂದರೆ ಅದನ್ನು ಮುಂದೆ ಸರಿಯಾದ ಸಮಯದವರೆಗೆ ಮುಂದುವರೆಸಿ. ಎರಡೂ ಪ್ರಭುತ್ವಗಳ ರಾಷ್ಟ್ರೀಯ ಹಿತಾಸಕ್ತಿಗಳ ದೃಷ್ಟಿಯಿಂದ ಮಹತ್ವದ ಇತರ ಹಲವಾರು ವಿವಾದಗಳ ಬಗ್ಗೆ ಪರಸ್ಪರ ಒಪ್ಪಿತವಾದ ನಿರ್ಧಾರಕ್ಕೆ ಬಂದರೆ ತೊಂದರೆಯೇನಿಲ್ಲ.

ಚೀನೀ ವಿದೇಶಾಂಗ ಮಂತ್ರಿಯವರ ಮುಂಬರುವ ಭೇಟಿಯನ್ನು ಸ್ವಾಗತಿಸುವಾಗ ಮತ್ತು ಎರಡು ದೇಶಗಳ ನಡುವೆ ಸಂಬಂಧಗಳನ್ನು ಸಾಮಾನ್ಯಗೊಳಿಸುವುದರಲ್ಲಿ ಅವರ ನಿಯೋಗಕ್ಕೆ ಯಶಸ್ಸು ಕೋರೇವಾಗ ಈ ಸಮಸ್ಯೆಯ ಕ್ಲಿಷ್ಟತೆಯ ಬಗ್ಗೆ ನಾವು ಮರೆತಿಲ್ಲ. ಈ ಸಮಸ್ಯೆ ಎರಡೂ ದೇಶಗಳ ನಡುವಿನ ಸಂಬಂಧಗಳು ಮುರಿದುಬಿದ್ದ ಮೇಲೆ ಕಳೆದೆರಡು ದಶಕಗಳಲ್ಲಿ ಹೊಸ ಆಯಾಮ ಪಡೆದುಕೊಂಡಿದೆ.

ಭಾರತ ಮತ್ತು ಸೋವಿಯೆಟ್ ಒಕ್ಕೂಟದ ನಡುವಿನ ಉತ್ತಮ ಸಂಬಂಧಗಳು ಕಳೆದೆರಡು ದಶಕಗಳಲ್ಲಿ ಬಹಳಷ್ಟು ಸುಧಾರಿಸಿದ್ದರೆ, ಸೋವಿಯೆಟ್ ಒಕ್ಕೂಟ ಮತ್ತು ಜನತಾ ಚೀನದ ನಡುವಿನ ಸಂಬಂಧಗಳು ಹದಗೆಟ್ಟು ಪರಸ್ಪರ ವಿರೋಧಿಯಾಗಿ ನಿಂತಿವೆ. ಅಫಘಾನಿಸ್ತಾನದ ಬಗ್ಗೆ ಪರಸ್ಪರ ಏಕ್‌ದಂ ವಿರೋಧೀ ನಿಲುವು ತಳೆದಿವೆ. ಇತರ ಇಂತಹ ಕೆಲವು ವಿವಾದಗಳ ಬಗ್ಗೆ ಹೇಳಬೇಕಾಗಿಯೇ ಇಲ್ಲ. ಇದೇ ಸಮಯದಲ್ಲಿ ಚೀನಾ ಹಾಗೂ ವಿಯೆಟ್ನಾಂ ನಡುವೆ ಇದ್ದ ನಿಕಟ ಬಾಂಧವ್ಯ ವಿಷಮಿಸಿ ವೈರ ಸಂಬಂಧಗಳಾಗಿಬಿಟ್ಟಿವೆ.

ಮೂಲಭೂತ ಭಿನ್ನಾಭಿಪ್ರಾಯ

ಸಮಕಾಲೀನ ಜಗತ್ತು ಎದುರಿಸುತ್ತಿರುವ ಹಲವು ಮಹತ್ವದ ಸಮಸ್ಯೆಗಳನ್ನು ಕುರಿತಂತೆ ಈ ಭಿನ್ನಾಭಿಪ್ರಾಯಗಳು ಬಹಳವಾಗಿ ಅಪೇಕ್ಷಿಸುವ ಭಾರತ-ಚೀನಾ ನಡುವಿನ ಉತ್ತಮ ಸಂಬಂಧಗಳ ಮೇಲೆ ಹಾಗೂ ಅವನ್ನು ಮತ್ತಷ್ಟು ಬಲಪಡಿಸಿ ಅಭಿವೃದ್ಧಿಗೊಳಿಸುವುದರ ಮೇಲೆ ನಕಾರಾತ್ಮಕ ಪ್ರಭಾವಬೀರಬಹುದೆಂದು ಭಾವಿಸುವುದು ಸಾಧ್ಯವಿಲ್ಲವೇ ? ವಾಸ್ತವವಾದಿಗಳಾದ ನಾವು ಈ ತೊಂದರೆಗಳು, ಅಪಾಯದ ಸಾಧ್ಯತೆಗಳು ಹಾಗೂ ಸೋಲುಗಳ ಬಗ್ಗೆ ತಿಳಿದಿದ್ದೇವೆ. ಹೀಗಿದ್ದರೂ ಜನತಾ ಚೀನಾ ಇಂದು ಸಮಾಜವಾದೀ ಸೋವಿಯೆಟ್ ಒಕ್ಕೂಟದೊಡನೆ ವೈರ ಕಟ್ಟಿಕೊಂಡು ಸಾಮ್ರಾಜ್ಯಶಾಹೀ ಅಮೇರಿಕಾದೊಡನೆ ಮಿತ್ರತ್ವದಿಂದಿದೆ ಎಂಬ ಕಾರಣದ ಮೇಲೆ ಭಾರತ-ಚೀನಾ ಸಂಬಂಧಗಳನ್ನು ಪರೀಕ್ಷಿಸುವಾಗ ಚೀನಾ ಜನತಾ ಗಣತಂತ್ರ ಹಾಗೂ ಅದರ ಆಳುವ ಕಮ್ಯುನಿಸ್ಟ್ ಪಕ್ಷ ತನ್ನ ಆಂತರಿಕ ಹಾಗೂ ಬಾಹ್ಯ ಧೋರಣೆಗಳಲ್ಲಿ ತಪ್ಪಾದ ದಾರಿಯನ್ನು ಹಿಡಿಯಲು ಕಾರಣವಾದ ಹಿನ್ನೆಲೆಯನ್ನು ನಿರ್ಲಕ್ಷಿಸುವುದು ಏಕ್‌ದಂ ವ್ಯಕ್ತಿನಿಷ್ಠ ಹಾಗೂ ತಪ್ಪು ರೀತಿಯಾಗುತ್ತದೆ.

ಮಹಾನ್ ದಾಖಲೆ

ಚೀನೀ ಕಮ್ಯುನಿಸ್ಟ್ ಪಕ್ಷ 1921ರಲ್ಲಿ ಸ್ಥಾಪಿತವಾಗಿ ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷ ಹಾಗೂ ಲೆನಿನ್ ಪ್ರಾರಂಭಿಸಿದ "ತೃತೀಯ ಅಂತರಾಷ್ಟ್ರೀಯ"ದ ಹೆಮ್ಮೆಯ ಸದಸ್ಯನಾಗಿ ಉಳಿದಿತ್ತು. ಚೀನೀ ಜನತೆಯ ಅಸಂಖ್ಯಾತ ವರ್ಗ ಹಾಗೂ ಸಾಮೂಹಿಕ ಹೋರಾಟಗಳ ನೇತೃತ್ವವಹಿಸಿದ ಮಹಾನ್ ದಾಖಲೆ ಅದರದ್ದು. ಈ ಹೋರಾಟಗಳೇ ಅಂತಿಮವಾಗಿ 1949ರ ಅಕ್ಟೋಬರ್‌ನಲ್ಲಿ ರಾಷ್ಟ್ರೀಯ ವಿಮೋಚನಾ ಸಮರ ಯಶಸ್ವಿಯಾಗುವಂತೆ ಮಾಡಿದವು. ಚೀನೀ ಹಾಗೂ ಜಾಗತಿಕ ಕಮ್ಯುನಿಸ್ಟ್ ಚಳವಳಿಯ ಬೆಳವಣಿಗೆಗಳ ಬಗ್ಗೆ ತಿಳಿದಿರುವ ಪ್ರತಿಯೊಬ್ಬ ಕಮ್ಯುನಿಸ್ಟನೂ 1949 ರಿಂದ 1959ರ ದಶಕದಲ್ಲಿ ಕ್ರಾಂತಿಯ ಪ್ರಜಾಪ್ರಭುತ್ವದ ಹಂತದ ಗುರಿಗಳನ್ನು ಯಶಸ್ವಿಯಾಗಿ ಸಾಧಿಸಿ ಸೋದರ ಸಮಾಜ

ಪ್ರಾರಂಭದ ಹಂತಗಳಲ್ಲಿ ಸ್ವಲ್ಪ ಸಮಯದವರೆಗೆ ಬಲಪಂಥೀಯ ಪರಿಷ್ಕರಣವಾದದ ವಿರುದ್ಧ ಹೋರಾಟದ ನೇತೃತ್ವ ವಹಿಸಿದ್ದ ಚೀನೀ ಕಮ್ಯುನಿಸ್ಟ್ ಪಕ್ಷ ನಂತರ ತೀರಾ ಒಡ್ಡೊಡ್ಡಾದ ಎಡ-ದುಸ್ಸಾಹಸವಾದದ ಕಡೆಗೆ ದಾರಿತಪ್ಪಿ ಚೀನಾ ಜನತಾ ಗಣತಂತ್ರದ ಆಂತರಿಕ ಹಾಗೂ ಬಾಹ್ಯ ಧೋರಣೆಗಳು ವಿರೂಪಗೊಳ್ಳುವಂತಾಯಿತು. "ಮಹಾ ಸಾಂಸ್ಕೃತಿಕ ಕ್ರಾಂತಿ" ಎಂದು ಕರೆಯಲ್ಪಟ್ಟ ಅವಧಿಯಲ್ಲಿನ ದುರಂತಕಾರೀ ಸಾಮಾಜಿಕ-ಆರ್ಥಿಕ ಬೆಳವಣಿಗೆಗಳು ವಿದೇಶ ನೀತಿಯ ಮೇಲೆ ತಮ್ಮ ನೇರ ಪ್ರಭಾವ ಬೀರಿದವು. 1976ರಲ್ಲಿ ಮಾವೋ ಜೆಡೊಂಗ್‌ರ ನಿಧನದ ನಂತರ ಚೀನೀ ಕಮ್ಯುನಿಸ್ಟ್ ನಾಯಕತ್ವ ಪಕ್ಷವನ್ನು, ಪ್ರಭುತ್ವವನ್ನು, ಜನತೆಯನ್ನು ಹಾಗೂ ಅರ್ಥವ್ಯವಸ್ಥೆಯನ್ನು ರಕ್ಷಿಸುವ ಪಕ್ಷದೊಳಗಣ ಗಂಭೀರ ಹೋರಾಟದಲ್ಲಿ ತೊಡಗಿದೆ. ಸಾಂಸ್ಕೃತಿಕ ಕ್ರಾಂತಿಯ ಸಮಯದ ವಿನಾಶಕಾರೀ ಧೋರಣೆಗಳು ಅರ್ಥವ್ಯವಸ್ಥೆಯ ಹಾಗೂ ಸಾಮಾಜಿಕ ಜೀವನದ ಮೂಲಭೂತ ಸಮಾಜವಾದೀ ಅಡಿಗಲ್ಲಿಗೇ ಬೆದರಿಕೆ ಒಡ್ಡಿದ್ದವು.

ಕಮ್ಯುನಿಸ್ಟ್ ಪಕ್ಷಗಳು ಎಂದು ಹೇಳಿಕೊಳ್ಳಲರ್ಹವಾದ ಎಲ್ಲಾ ಪಕ್ಷಗಳು ಈ ಆಂತರಿಕ ತಪ್ಪೊಪ್ಪುಗಳನ್ನು ಎಂದು ಒತ್ತಾಯಪೂರ್ವಕ ಹೇಳುವ ಸಿದ್ಧಾಂತಗಳ ಬಗ್ಗೆ ನಮಗೇನೂ ವಿಶ್ವಾಸವಿಲ್ಲ. ಮಹಾನ್ ಕಾರ್ಲ್ ಮಾರ್ಕ್ಸ್ ವೀಕ್ಷಿಸಿದಂತೆ "ಸೈನಿಕ ಹಿತಾಸಕ್ತಿಯಿಂದ ಸೀಮೆಗಳನ್ನು ನಿರ್ಧರಿಸುವುದಾದರೆ ಇಂತಹ ಕೇಳಿಕೆಗಳಿಗೆ ಕೊನೆಯೇ ಇಲ್ಲ". ಇಂತಹ ಸಿದ್ಧಾಂತಗಳು ನಮ್ಮ ಈ ಕಾಲದಲ್ಲಿ ವೇಗವಾಗಿ ಅಭಿವೃದ್ಧಿಹೊಂದುತ್ತಿರುವ ತಂತ್ರಜ್ಞಾನ, ಸೈನಿಕ ವಿಜ್ಞಾನ ಹಾಗೂ ಸಲಕರಣೆಗಳಿಂದುರು ತಮ್ಮೆಲ್ಲಾ ಶಕ್ತಿಯನ್ನು ಕಳಕೊಂಡಿವೆ. ವಾಸ್ತವದಲ್ಲಿ ಎರಡು ನೆರೆಕರೆಯ ದೇಶಗಳು, ಭಾರತ ಮತ್ತು ಚೀನಾದಂತಹ ದೇಶಗಳ ಮಧ್ಯೆ ರಕ್ಷಣೆಯ ಅತೀ ದೊಡ್ಡ ಅಸ್ತ್ರವೆಂದರೆ ಅವೆರಡರ ಕೈಗಾರಿಕಾ, ಆರ್ಥಿಕ ಹಾಗೂ ಸೈನಿಕ ಶಕ್ತಿ ಮಾತ್ರವಲ್ಲ ಅವೆರಡರ ನಡುವಿನ ಉತ್ತಮ, ಮಿತ್ರಭಾವದ ಹಾಗೂ ನೆರೆಹೊರೆಯ ಸಂಬಂಧಗಳನ್ನು ಹೊಂದಿರುವುದು.

ಬಲಪ್ರಯೋಗದಿಂದ ಪರಿಹಾರ ಸಾಧ್ಯವಿಲ್ಲ

ಭಾರತ ಮತ್ತು ಚೀನಾದ ನಡುವಿನ ವಿವಾದವನ್ನು ಬಲಪ್ರಯೋಗ ಅಥವಾ ಶಸ್ತ್ರಾಸ್ತ್ರಗಳಿಂದ ಪರಿಹರಿಸುವುದು ಸಾಧ್ಯವಿಲ್ಲ. ಮೇಲಿನ ಎದುರು-ಬದುರು ಕೂತು ಶಾಂತಿಯುತ ಚರ್ಚೆ ನಡೆಸುವುದಲ್ಲದೆ ಬೇರೆ ಪರಿಹಾರವಿಲ್ಲ.

ಸಮಾಜವಾದೀ ಚೀನಾದ ಧೋರಣೆಗಳು 1960ರ ದಶಕದ ಆರಂಭದಲ್ಲಿ ಸ್ಪಷ್ಟವಾಗಿ ಸಾಮ್ರಾಜ್ಯಶಾಹಿ ವಿರೋಧಿಯಾಗಿದ್ದು, ಮುಖ್ಯವಾಗಿ ಅಮೇರಿಕಾದ ಸಾಮ್ರಾಜ್ಯಶಾಹಿಯ ವಿರುದ್ಧ ನಿರ್ದೇಶಿಸಲ್ಪಟ್ಟಿದ್ದರೆ; ನಂತರದ ಅವಧಿಯಲ್ಲಿ ಅದು ಬಹಳಷ್ಟು ಬದಲಾಗಿದೆ. ಅಮೇರಿಕಾ ಹಾಗೂ ಭಾರತ ನಡುವಿನ ಸಂಬಂಧ ಈ ಸಮಯದಲ್ಲಿ ಅಮೇರಿಕಾ ಪಾಕಿಸ್ತಾನಕ್ಕೆ ಭಾರೀ ಪ್ರಮಾಣದಲ್ಲಿ ಶಸ್ತ್ರಾಸ್ತ್ರ ಒದಗಿಸುವುದರೊಂದಿಗೆ ಹೆಚ್ಚೆಚ್ಚು ವಿಷಮಿಸುತ್ತಿದೆ.

1960 ಮತ್ತು 1980ರ ನಡುವಿನ ಅವಧಿಯಲ್ಲಿ ಸೋವಿಯೆಟ್ ಒಕ್ಕೂಟ ಭಾರತದೊಡನೆ ನಿಕಟ ಸಂಬಂಧಗಳನ್ನು ಹೆಚ್ಚೆಚ್ಚಾಗಿ ಅಭಿವೃದ್ಧಿಪಡಿಸುತ್ತಿದ್ದರೆ ಚೀನಾ ಜನತಾ ಗಣತಂತ್ರ ಪಾಕಿಸ್ತಾನದೊಡನೆ ನಿಕಟ ಬಾಂಧವ್ಯ ಬೆಳೆಸಿಕೊಂಡಿದೆ ಮತ್ತು ಭಾರತ ಮತ್ತು ಪಾಕಿಸ್ತಾನಗಳ ನಡುವೆ 1947ರಲ್ಲಿ ಅವೆರಡು ಸ್ಥಾಪಿತವಾದಂದಿನಿಂದ ಇದುವರೆಗೆ ದೀರ್ಘ ಅವಧಿಯಲ್ಲಿ ವಿಷಮತೆ ಹಾಗೂ ವೈರತ್ವ ಬೆಳೆಯುತ್ತಿವೆ.

ಎಲ್ಲರಿಗೂ ತಿಳಿದಿರುವಂತೆ, ಭಾರತ ಹಾಗೂ ಚೀನಾದ ಸರಕಾರಗಳು ವಿಯೆಟ್ನಾಂ, ಕಂಪೂಚಿಯಾ ಹಾಗೂ ಧಗಳನ್ನು ಸಾಮಾನ್ಯಗೊಳಿಸುವುದನ್ನು ವಿರೋಧಿಸುವವರಿಂದ ಮೂಲಭೂತವಾಗಿ ಬೇರೆಯಾದ ಅಭಿಪ್ರಾಯ ಹೊಂದಿದ್ದೇವೆ. ಅವರು ಒಂದೆಡೆ ಚೀನಾ ಜನತಾ ಗಣತಂತ್ರ ಒಂದು ದೊಡ್ಡ ಸಮಾಜವಾದೀ ದೇಶವೆನ್ನುತ್ತಾರೆ; ಇನ್ನೊಂದೆಡೆ ಚೀನಾ ತಪ್ಪಾದ ಸೋವಿಯೆಟ್ ವಿರೋಧೀ ವಿದೇಶ ನೀತಿ ಅನುಸರಿಸುವುದರಿಂದ ಅದರ ಸಮಾಜವಾದೀ ಸ್ವಭಾವವನ್ನೇ ನಿರಾಕರಿಸುತ್ತಾರೆ. ಆದ್ದರಿಂದ ನಮ್ಮ ಈ ಭಿನ್ನಾಭಿಪ್ರಾಯವನ್ನು ಮತ್ತಷ್ಟು ಒತ್ತುಕೊಟ್ಟು ಹೇಳಬೇಕಾಗುತ್ತದೆ.

ಯಾವುದಾದರೊಂದು ಸಮಾಜವಾದೀ ಪ್ರಭುತ್ವದ ತಪ್ಪಾದ ರಾಜಕೀಯ ದಾರಿಯ ವಿರುದ್ಧ ಸಿದ್ಧಾಂತಬದ್ಧ ಹೋರಾಟದ ಒಂದು ದಾರಿಯಿದೆ. ಒಂದು ಸಮಾಜವಾದಿ ದೇಶ ಸಮಾಜವಾದ ಮತ್ತು ಸಮತಾವಾದದ ಗುರಿಸಾಧನೆಯಲ್ಲಿ ಸಂಪೂರ್ಣವಾಗಿ ವಿರೋಧಿಯಾದ ಕೈತಪ್ಪಿ ಹೋದ ದೇಶವೆಂದು ಘೋಷಿಸುವುದು ಇನ್ನೊಂದು ದಾರಿ. ಸಿ. ಪಿ. ಐ.(ಎಂ)ನ ಆಲೋಚನೆಯ ದಿಕ್ಕು ಮೊದಲಿನ ದಾರಿಯನ್ನಾಧರಿಸಿದೆ; ಸಿ.ಪಿ.ಐ.ನದ್ದು ಈ ಎರಡನೇ ದಾರಿಯನ್ನವಲಂಬಿಸಿದೆ.

ಚೀನೀ ಕಮ್ಯುನಿಸ್ಟ್ ಪಕ್ಷದ ತಪ್ಪುಗಳನ್ನು ಬೇರೆ ದಾರಿ ಹಿಡಿದುದನ್ನು ವಾದೀ ದೇಶಗಳ, ವಿಶೇಷವಾಗಿ ಸೋವಿಯೆತ್ ಒಕ್ಕೂಟದ, ನೆರವಿನಿಂದ ಚೀನಾದಲ್ಲಿ ಸಮಾಜವಾದವನ್ನು ಕಟ್ಟಲು ತೊಡಗಿತ್ತು ಎಂಬುದನ್ನು ಒಪ್ಪಿಕೊಳ್ಳುತ್ತಾನೆ.

ಜಾಗತಿಕ ಕಮ್ಯುನಿಸ್ಟ್ ಚಳವಳಿಯಲ್ಲಿ ತೀವ್ರ ರಾಜಕೀಯ-ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಮೂಡಿದ್ದು 1957-60ರ ಅವಧಿಯಲ್ಲಿ. ಈ ಭಿನ್ನಾಭಿಪ್ರಾಯಗಳ ಮೇಲೆ ಎಲ್ಲರೂ ಒಪ್ಪಿದ ನಿರ್ಧಾರಗಳನ್ನು ಕೈಗೊಂಡು 1957ರ ಘೋಷಣೆಯಲ್ಲಿ, ನಂತರ 1960ರ ಮಾಸ್ಕೋ ಹೇಳಿಕೆಗಳಲ್ಲಿ ಅವನ್ನು ಸೇರಿಸಲಾಗಿತ್ತು. ಕಮ್ಯುನಿಸ್ಟ್ ಚಳವಳಿಯ ಈ ಎರಡೂ ಪ್ರಸಿದ್ಧ ಅಂತರಾಷ್ಟ್ರೀಯ ದಸ್ತಾವೇಜುಗಳು "ಮುಖ್ಯ ಅಪಾಯವಾಗಿಯೇ ಉಳಿದಿರುವ ಪರಿಷ್ಕರಣವಾದದ ವಿರುದ್ಧ ಹಾಗೂ ಸೈದ್ಧಾಂತಿಕವಾಗಿ ಮತ್ತು ಕಾರ್ಯತಃ ಕಮ್ಯುನಿಸ್ಟ್ ಪಕ್ಷಗಳು ನಿರಂತರವಾಗಿ ಜಾಗರೂಕವಾಗಿರದಿದ್ದರೆ ಬೆಳವಣಿಗೆಯ ಕೆಲವು ಹಂತಗಳಲ್ಲಿ ಮುಖ್ಯ ಅಪಾಯ ಉಂಟುಮಾಡಬಹುದಾದ ಶಾಸ್ತ್ರಾಂಧತೆ ಹಾಗೂ ಪಂಥವಾದದ ವಿರುದ್ಧ ಹೀಗೆ ಎರಡು ರಂಗಗಳಲ್ಲಿ ಸತತ ಹಾಗೂ ನಿರ್ಧಾರಾತ್ಮಕ ಹೋರಾಟ ನಡೆಸಬೇಕು" ಎಂದು ಉತ್ಸಾಹಕಾರೀ ಕರೆ ಕೊಟ್ಟಿದ್ದವು.

ಗಮನಿಸುತ್ತಿದ್ದಾರೆ. ಅದೇ ಸಮಯದಲ್ಲಿ ಸಾಂಸ್ಕೃತಿಕ ಕ್ರಾಂತಿಯ ಹಂತದಲ್ಲಿ ಮೂಡಿಬಂದ ವಿದೇಶ ನೀತಿ ಮುಂದುವರಿಯುತ್ತಿರುವುದನ್ನು ಗಮನಿಸಲೂ ಮರೆಯುವುದಿಲ್ಲ. ಈ ವಿದೇಶ ನೀತಿ ಅದು ಸೋವಿಯೆತ್ ಸಾಮಾಜಿಕ-ಸಾಮ್ರಾಜ್ಯಶಾಹಿ ಎಂದು ಕರೆದ ಸಿದ್ಧಾಂತ ಹಾಗೂ "ಮೂರು ಜಗತ್ತಿ"ನ ಮಾರ್ಕ್ಸ್‌ವಾದಿಯಲ್ಲದ ಸಿದ್ಧಾಂತವನ್ನಾಧರಿಸಿತ್ತು.

ಸಾಮಾನ್ಯಗೊಳಿಸುವುದರ ವಿರೋಧಿಗಳು

ಭಾರತ ಮತ್ತು ಚೀನಾ ನಡುವಿನ ಸಂಬಂಧಗಳನ್ನು ಸಾಮಾನ್ಯಗೊಳಿಸುವುದನ್ನು ವಿರೋಧಿಸುವ ಕಮ್ಯುನಿಸ್ಟರು ಬೇರೆಬೇರೆ ಸಂದರ್ಭಗಳಲ್ಲಿ ಬೇರೆಬೇರೆ ವಾದಗಳನ್ನು ಹೂಡುತ್ತಾ ಸಂಬಂಧಗಳನ್ನು ಸಾಮಾನ್ಯಗೊಳಿಸಬೇಕೆಂದು ಒತ್ತಾಸೆಯಿಂದ ಹೇಳುವ ಸಿ. ಪಿ. ಐ. (ಎಂ)ನ ನಿಲುವನ್ನು ಹೀಯಾಳಿಸುತ್ತಾರೆ. ದೇಶಗಳ ನಡುವಿನ ಸಂಬಂಧವನ್ನು ಸಾಮಾನ್ಯೀಕರಿಸಿ ಸರಿಯಾದ ಸಂಬಂಧಗಳನ್ನು ಕಾದುಕೊಳ್ಳುವುದು ಅಭಿವೃದ್ಧಿಹೊಂದಿದ ಬಂಡವಾಳಶಾಹಿ ಹಾಗೂ ಸಾಮ್ರಾಜ್ಯಶಾಹೀ ದೇಶ

(7ನೇ ಪುಟ ನೋಡಿ)

ಮತ್ತೆ ಶೇಷಾದ್ರಿಯವರ ಅಪಪ್ರಲಾಪ

ಶ್ರೀ ಹೊ. ವೆ. ಶೇಷಾದ್ರಿಯವರು ವಿಕ್ರಮದಲ್ಲಿ 'ಚಿಂತನ ಕ್ಷಣ'ದ ಮೂಲಕ ಆಗಿಂದಾಗ ಮಾರ್ಕ್ಸ್‌ವಾದದ ಬಗ್ಗೆ, ಮಾರ್ಕ್ಸ್‌ವಾದಿಗಳ ಬಗ್ಗೆ ತನ್ನ ಅಜ್ಞಾನವನ್ನು ಪ್ರದರ್ಶಿಸುತ್ತಲೇ ಇರುತ್ತಾರೆ.

ಇಂದು ಬಂಡವಾಳಶಾಹಿ ಭೂಮಾಲಕ ವ್ಯವಸ್ಥೆ ಅತ್ಯಂತ ಗಂಭೀರವಾದ ಬಿಕ್ಕಟ್ಟಿನಲ್ಲಿದ್ದು ಈ ವ್ಯವಸ್ಥೆಯ ಚೌಕಟ್ಟಿನೊಳಗೆ ಯಾವ ಸಮಸ್ಯೆಯನ್ನೂ ಬಗೆಹರಿಸಲು ಸಾಧ್ಯವಿಲ್ಲದಾಗಿದೆ. ಬಂಡವಾಳಶಾಹಿ ವಿರೋಧಿ, ಭೂಮಾಲಕ ವಿರೋಧಿ ಕ್ರಾಂತಿಕಾರಿ ಚಳುವಳಿ ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷದ ನೇತೃತ್ವದಲ್ಲಿ ಬೆಳೆದುಬರುತ್ತಿದೆ. ಇದು ಬಂಡವಾಳಶಾಹಿ - ಭೂಮಾಲೀಕವರ್ಗಗಳಲ್ಲಿ ಸಹಜವಾಗಿಯೇ ಭಯ ಸೃಷ್ಟಿಸಿದೆ. ಅವರು ಮತ್ತು ಅವರ ಪ್ರತಿನಿಧಿಗಳು ಒಂದೆಡೆಯಿಂದ ಕ್ರೂರ ಹಿಂಸೆ ಉಪಯೋಗಿಸಿ ಈ ಕ್ರಾಂತಿಕಾರಿ ಚಳುವಳಿಯನ್ನು ಮುರಿಯಲು ಯತ್ನಿಸುತ್ತಿದ್ದರೆ ಮತ್ತೊಂದೆಡೆ ಸೈದ್ಧಾಂತಿಕ ರಂಗದಲ್ಲಿ ಸುಳ್ಳು ಹೇಳಿ, ಅಪಪ್ರಚಾರ ನಡೆಸಿ, ಬೆಳೆದುಬರುತ್ತಿರುವ ಈ ಕ್ರಾಂತಿಕಾರಿ ಚಳುವಳಿಯ ಬೆಳವಣಿಗೆಯನ್ನು ತಡೆಯುವ ವಿಫಲ ಯತ್ನ ನಡೆಸುತ್ತಲೇ ಇದ್ದಾರೆ.

ಬಂಡವಾಳಶಾಹಿ-ಭೂಮಾಲೀಕ ವರ್ಗದ ಈ ಕುತಂತ್ರದ ಒಂದು ಭಾಗವೇ ಶ್ರೀ ಹೊ. ವೆ. ಶೇಷಾದ್ರಿಯವರ ಲೇಖನಮಾಲೆ "ಧರ್ಮಕ್ಷೇತ್ರೇ ಕುರುಕ್ಷೇತ್ರೇ".

ಈ ಲೇಖನಮಾಲೆಯಲ್ಲಿ ಶ್ರೀ ಶೇಷಾದ್ರಿಯವರು ಕೇರಳದಲ್ಲಿ ಅಧಿಕಾರದಲ್ಲಿರುವ ಎಡ-ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯರಂಗ ಸರಕಾರದ ಮೇಲೆ, ಅದರ ಅತ್ಯಂತ ಮುಖ್ಯ ಘಟಕವಾದ ಮಾರ್ಕ್ಸ್‌ವಾದಿ ಪಕ್ಷದ ಮೇಲೆ ವಿಷ ಕಾರಿದ್ದಾರೆ. ಇಂದಿರಾ ಕಾಂಗ್ರೆಸ್ಸಿಗರನ್ನೊಳಗೊಂಡು ಎಲ್ಲಾ ಗುತ್ತೇದಾರಿ ಬಂಡವಾಳಶಾಹಿ–ಭೂಮಾಲೀಕ ವರ್ಗಗಳ ಪ್ರತಿನಿಧಿಗಳು ಅನುಸರಿಸುತ್ತಿರುವ ಈ ತಂತ್ರವನ್ನು ಶ್ರೀ ಶೇಷಾದ್ರಿಯವರೂ ಸ್ವೀಕರಿಸಿರುವುದರಲ್ಲಿ ಆಶ್ಚರ್ಯವಿಲ್ಲ.

ಕೇಂದ್ರದಲ್ಲಿ ಅಧಿಕಾರರೂಢ ಇಂದಿರಾ ಕಾಂಗ್ರೆಸ್ ಬಂಡವಾಳಶಾಹಿ-ಭೂಮಾಲೀಕ ಧೋರಣೆಗಳನ್ನು ಅನುಸರಿಸುತ್ತಿರುವುದರಿಂದ ದೇಶದ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗದೇ ಸಮಸ್ಯೆಗಳು ತೀಕ್ಷ್ಣಗೊಳ್ಳುತ್ತಿವೆ. ಇದರಿಂದಾಗಿ ಇಂದಿರಾ ಕಾಂಗ್ರೆಸ್ ಬಗ್ಗೆ ಜನತೆಗೆ ಇದ್ದ ಭ್ರಮೆ ನಿರಸನಹೊಂದುತ್ತಿದೆ. ಈ ಹಿನ್ನೆಲೆಯಲ್ಲಿ ಕೇರಳದಲ್ಲಿ ಇಂದು ಅಸ್ತಿತ್ವದಲ್ಲಿರುವ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯರಂಗ ಬದಲಿ ಶಕ್ತಿಯ ರೂಪವಾಗಿ ಕಾಣುತ್ತಿದೆ. ದೇಶದ ಸಾಮಾನ್ಯ ಜನರು ಕೇರಳದತ್ತ ಕುತೂಹಲದಿಂದ ಆಶೆಯಿಂದ ನೋಡುತ್ತಿದ್ದಾರೆ. ಕೇರಳದಲ್ಲಿ ಇಂದು ಅಸ್ತಿತ್ವದಲ್ಲಿರುವ ಐಕ್ಯರಂಗ ದೇಶದಾದ್ಯಂತ ಬೆಳೆದುಬಂದರೆ ಅದರಿಂದ ಬಂಡವಾಳಶಾಹಿ-ಭೂಮಾಲೀಕವರ್ಗಗಳ ಹಿತಾಸಕ್ತಿಗೆ ಬರಬಹುದಾದ ಆಘಾತದ ಬಗ್ಗೆ ಆಳುವವರ್ಗಗಳಿಗೆ ಸ್ಪಷ್ಟ ತಿಳುವಳಿಕೆ ಇದೆ. ಆದ್ದರಿಂದಲೇ ಅವರು ಭಯವಿಹ್ವಲರಾಗಿದ್ದಾರೆ. ಬೆಳೆದುಬರುತ್ತಿರುವ ಈ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯರಂಗವನ್ನು ಮುರಿಯಲು ಶೋಷಕವರ್ಗಗಳ ಪ್ರತಿನಿಧಿಗಳು ದೇಶದಾದ್ಯಂತ ಸರ್ವಪ್ರಯತ್ನ ನಡೆಸುತ್ತಿದ್ದಾರೆ. ಇದರ ಒಂದು ಭಾಗವಾಗಿಯೇ ಶ್ರೀ ಶೇಷಾದ್ರಿಯವರು ತನ್ನ ಲೇಖನಮಾಲೆಯ ಮೂಲಕ ಭಾರತ ಕಮ್ಯುನಿಸ್ಟ್(ಮಾರ್ಕ್ಸ್‌ವಾದಿ) ಪಕ್ಷದ ಮೇಲೆ ಅಪಪ್ರಚಾರವೆಸಗಲು ಹೊರಟಿದ್ದಾರೆ.

ಶ್ರೀ ಶೇಷಾದ್ರಿಯವರು ಈ ಲೇಖನದ ಪ್ರಾರಂಭದಲ್ಲಿ ಹೇಳುತ್ತಾರೆ "ಕೇರಳದ ತಲಿಚೇರಿ ಒಂದು ಉಜ್ವಲ ಸಂಕೇತ. ಅಲ್ಲೊಂದು ಕುರುಕ್ಷೇತ್ರ ಏರ್ಪಟ್ಟಿದೆ. ಧರ್ಮಕ್ಷೇತ್ರ ಏರ್ಪಟ್ಟಿದೆ. ನಾಳಿನ ಭಾರತ ರಾಮ ಕೃಷ್ಣರ ನಾಡಾಗಿ ಉಳಿಯಬೇಕೇ ಅಥವಾ ಸ್ಟಾಲಿನ್, ಮಾವೋಗಳ ಭೂಮಿ ಆಗಿರಬೇಕೇ ಎನ್ನುವ ತೀರ್ಮಾನ ಇಲ್ಲಿ ಆಗುತ್ತಿದೆ".

ಶ್ರೀ ಶೇಷಾದ್ರಿಯವರೇ ಕೇರಳದ ತಲಿಚೇರಿ ಮಾತ್ರವಲ್ಲ ಇಡೀ ದೇಶವೇ ಒಂದು ಕುರುಕ್ಷೇತ್ರವಾಗಿ ಮಾರ್ಪಟ್ಟಿದೆ.

ರಾಮ ಕೃಷ್ಣರ ಕಾಲವೆಂದರೆ ನಮ್ಮ ದೇಶದಲ್ಲಿ ಗುಲಾಮ ಪದ್ಧತಿಯ ಕಾಲ. ಆನಂತರ ಪಾಳೆಯಗಾರಿ ವ್ಯವಸ್ಥೆ. ಇಂದಿನ ವ್ಯವಸ್ಥೆ ಬಂಡವಾಳಶಾಹಿ ವ್ಯವಸ್ಥೆ. ಪಾಳೆಯಗಾರಿ ಪದ್ಧತಿಯು ಸಂಪೂರ್ಣ ನಾಶವಾಗಿ ನಮ್ಮ ದೇಶದಲ್ಲಿ ಬಂಡವಾಳಶಾಹಿ ಪದ್ಧತಿ ಬೆಳೆದದ್ದಲ್ಲ. ಪಾಳೆಯಗಾರಿ ಪದ್ಧತಿಯ ಅವಶೇಷಗಳೊಂದಿಗೇ ಬಂಡವಾಳಶಾಹಿ ಪದ್ಧತಿ ಸಮಾಂತರವಾಗಿ ಬೆಳೆದುಬಂದಿದೆ. ಆದ್ದರಿಂದಲೇ ಹಳೆಯ ಶೋಷಣೆಯ ವಿಧಾನಗಳು ಹೊಸ ಶೋಷಣೆಯ ವಿಧಾನಗಳೊಂದಿಗೆ ಸಮ್ಮಿಳನವಾಗಿ ಮುಂದುವರಿಯುತ್ತಿದೆ. ಆದ್ದರಿಂದಲೇ ನಮ್ಮ ಸಮಾಜದಲ್ಲಿ ಜಾತಿಪದ್ಧತಿಯ ಮೂಲಕ ಬೆಳೆದುಬಂದ ಶೋಷಣೆ ಮುಂದುವರಿಯುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಮೇಲ್ಜಾತಿಯವರೆನ್ನಲಾಗುವ ಜಾತಿಯ ಭೂಮಾಲೀಕರು ಕೃಷಿ ಕೂಲಿಕಾರರಾದ ಶೂದ್ರರ ಮೇಲೆ ಕ್ರೂರ ದಬ್ಬಾಳಿಕೆ ನಡೆಸುತ್ತಿದ್ದಾರೆ. ಈ ವ್ಯವಸ್ಥೆ ಮುಂದುವರಿಯಬೇಕೇ; ಕೊನೆಗೊಳ್ಳಬೇಕೇ-ಇದು ಇಂದಿನ ಮುಖ್ಯ ಪ್ರಶ್ನೆ.

ಸ್ಟಾಲಿನ್-ಮಾವೋರ ನಾಡೆಂದರೆ ಸಮಾಜವಾದಿ ಕ್ರಾಂತಿ ಸಾಧಿಸಿರುವ ನಾಡುಗಳು. ರಷ್ಯದಲ್ಲಿ ಕಾರ್ಮಿಕರು-ರೈತರು ಶೋಷಕವರ್ಗಗಳ ವಿರುದ್ಧ ಸಂಘಟಿತ ಹೋರಾಟ ನಡೆಸಿ ಸಮಾಜವಾದಿ ಕ್ರಾಂತಿ ಸಾಧಿಸುವುದರಲ್ಲಿ ಸ್ಟಾಲಿನ್ ಮುಖ್ಯ ಪಾತ್ರವಹಿಸಿದ್ದಾರೆ. ಚೀನಾದಲ್ಲಿ ಇಂತಹ ಕ್ರಾಂತಿಯ ಸಾಧನೆಯಲ್ಲಿ ಮಾವೋ ಮಹತ್ವಪೂರ್ಣ ಕೊಡುಗೆ ಕೊಟ್ಟಿದ್ದಾರೆ.

ನಮ್ಮ ದೇಶದಲ್ಲಿ ಇಂದು ನಡೆಯುತ್ತಿರುವ ಪಾಳೆಯಗಾರಿ-ಬಂಡವಾಳಶಾಹಿ ಶೋಷಣೆ ಮತ್ತು ಅದಕ್ಕೆ ಕಾರಣವಾದ ಇಂದಿನ ವ್ಯವಸ್ಥೆ ಮುಂದುವರಿಯಬೇಕೇ ? ಅಥವಾ ಈ ವ್ಯವಸ್ಥೆಯನ್ನು ಕೊನೆಗೊಳಿಸಿ ಶೋಷಣೆರಹಿತ ವರ್ಗರಹಿತ ಸಮಾಜವಾದಿ ವ್ಯವಸ್ಥೆ ಸ್ಥಾಪನೆಯಾಗಬೇಕೇ ? ಇದು ಇಂದು ದೇಶದ ಮುಂದಿರುವ ಪ್ರಶ್ನೆ. ಶ್ರೀ ಶೇಷಾದ್ರಿಯವರು ಸಮಾಜವಾದಿ ಕ್ರಾಂತಿಯನ್ನು ವಿರೋಧಿಸಿ ಅದರ ಬಗ್ಗೆ ಅಪಪ್ರಚಾರವೆಸಗುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಏಕೆಂದರೆ ಅವರಂತಹ ಪಾಳೆಯಗಾರಿ-ಬಂಡವಾಳಶಾಹಿವರ್ಗಗಳ ಪ್ರತಿನಿಧಿಗಳು ಎಂದೂ ಸಮಾಜವಾದಿ ಕ್ರಾಂತಿಯನ್ನು ವಿರೋಧಿಸಿ ಮಾರ್ಕ್ಸ್‌ವಾದದ ಬಗ್ಗೆ ಅಪಪ್ರಚಾರ ನಡೆಸುತ್ತಲೇ ಇರುತ್ತಾರೆ.

ಲೇ : ಮಾರ್ಕ್ಸ್‌ವಾದಿ

ಶ್ರೀ ಶೇಷಾದ್ರಿಯವರು ತಲಿಚೇರಿ ಒಂದು ಕುರುಕ್ಷೇತ್ರವಾಗಿ ಮಾರ್ಪಟ್ಟಿದೆ ಎನ್ನುತ್ತಾರೆ. ಶ್ರೀ ಶೇಷಾದ್ರಿಯವರು ತಪ್ಪಿದ್ದಾರೆ. ತಲಿಚೇರಿ ಮಾತ್ರವಲ್ಲ ಇಡೀ ದೇಶವೇ ಒಂದು ಕುರುಕ್ಷೇತ್ರವಾಗಿ ಮಾರ್ಪಟ್ಟಿದೆ. ಅಂದು ಪಾಂಡವರು ತಮ್ಮ ಪಾಲಿನ ಭೂಮಿ ಕೇಳಿದಾಗ ಕೌರವ "ಸೂಜಿ ಮೊನೆಯಷ್ಟು ಭೂಮಿಯನ್ನೂ ಬಿಟ್ಟು ಕೊಡಲಾರೆ" ಎಂದ. ಆದ್ದರಿಂದ ಪಾಂಡವರಿಗೆ ಯುದ್ಧದ ಮೂಲಕವಲ್ಲದೆ ತಮ್ಮ ನ್ಯಾಯವಾದ ಪಾಲನ್ನು ಪಡೆಯಲು ಸಾಧ್ಯವಾಗದೇ ಹೋಯಿತು. ಯುದ್ಧ ಅನಿವಾರ್ಯವಾಗಿ ಕೌರವ-ಪಾಂಡವರು ರಣಾಂಗಣದಲ್ಲಿ ಮುಖಾಮುಖಿಗಳಾಗಿ ನಿಂತಾಗ ತನ್ನೆದುರು ನಿಂತವರೆಲ್ಲಾ ತನ್ನ ಬಾಂಧವರೇ ಎಂಬ ಭಾವನೆಯಿಂದ ಅರ್ಜುನನಲ್ಲಿ ಕ್ಲೈಬ್ಯತೆಮೂಡಿ ಗಾಂಡೀವವನ್ನು ಕೆಳಗಿಟ್ಟಾಗ ಕೃಷ್ಣ ಅವನನ್ನು ಸಂತೈಸಿ ಯುದ್ಧದ ಅನಿವಾರ್ಯತೆಯನ್ನು ಬೋಧಿಸಬೇಕಾಯಿತು.

ಇಂದೂ ಅಂತಹದೇ ಪರಿಸ್ಥಿತಿ ಬಂದೊದಗಿದೆ. ನಮ್ಮ ಭಾರತದ ಭೂಮಿಯ ಮೇಲಿನ ನಿಜವಾದ ಹಕ್ಕುದಾರರು ಕೃಷಿಕೂಲಿಗಾರರು ಮತ್ತು ಬಡರೈತರು. ನಮ್ಮ ಪುಣ್ಯಭೂಮಿಯಲ್ಲಿ ಸೃಷ್ಟಿಯಾಗುತ್ತಿರುವ ಸಂಪತ್ತಿನ ನಿಜವಾದ ಹಕ್ಕುದಾರರು ಈ ನಾಡಿನಲ್ಲಿ ದುಡಿಯುವ ಕೂಲಿಗಾರರು, ಮಧ್ಯಮವರ್ಗದ ನೌಕರರು ವಿದ್ಯಾರ್ಥಿಗಳು, ರೈತರೇ ಮೊದಲಾದ ಜನವಿಭಾಗಗಳವರು. ಆದರೆ ಆ ಸಂಪತ್ತನ್ನು ಕಸಿದುಕೊಂಡು ವಿದೇಶೀ ಸಾಮ್ರಾಜ್ಯಶಾಹಿಗಳು, ಟಾಟಾ, ಬಿರ್ಲಾರಂತಹ ಗುತ್ತೇದಾರಿ ಬಂಡವಾಳಶಾಹಿಗಳು, ಕಾಳಸಂತೆ ವ್ಯಾಪಾರಿಗಳು, ದೊಡ್ಡ ಭೂಮಾಲೀಕರು ಕೊಳ್ಳೆಹೊಡೆಯುತ್ತಿದ್ದಾರೆ. ಕೃಷಿ ಕೂಲಿಗಾರರು, ಕಾರ್ಮಿಕರು, ರೈತರು, ವಿದ್ಯಾರ್ಥಿಗಳು ತಮ್ಮ ನ್ಯಾಯವಾದ ಪಾಲಿಗಾಗಿ ಕೇಳಿದರೆ ಅಂದಿನ ಕೌರವನಂತೆ ಇಂದಿನ ವಿದೇಶೀ ಸಾಮ್ರಾಜ್ಯಶಾಹಿಗಳು, ಭೂಮಾಲೀಕರು, ಗುತ್ತೇದಾರಿ ಬಂಡವಾಳಶಾಹಿಗಳು, ಕಾಳಸಂತೆಕೋರರು "ಸೂಜಿಮೊನೆಯಷ್ಟು ಭೂಮಿಯನ್ನೂ ಕೊಡಲಾರೆವು" ಎನ್ನುತ್ತಿದ್ದಾರೆ. ಆದ್ದರಿಂದ ಈ ಆಧುನಿಕ ಕೌರವರ ವಿರುದ್ಧ ರೈತಕೂಲಿಗಾರರು, ಕಾರ್ಮಿಕರು, ವಿದ್ಯಾರ್ಥಿಗಳು ಮೊದಲಾದ ಜನಸಾಮಾನ್ಯರು ಹೋರಾಟ ನಡೆಸುವುದು ಅನಿವಾರ್ಯವಾಗಿದೆ. ಆದರಿಂದ ಅವರು ಹಿಮ್ಮೆಟ್ಟಿದಾಗ ಅರ್ಜುನನಿಗೆ ಕೃಷ್ಣ ಬೋಧಿಸಿದಂತೆ, ಮಾರ್ಕ್ಸ್‌ವಾದಿಗಳು ಜನಸಾಮಾನ್ಯರಿಗೆ ವರ್ಗಹೋರಾಟದ ಅನಿವಾರ್ಯತೆಯನ್ನು ಬೋಧಿಸುತ್ತಾರೆ. ಈ ಬಗ್ಗೆ ಶ್ರೀ ಶೇಷಾದ್ರಿಯವರಿಗೇಕೆ ಕೋಪ ? ಶ್ರೀ ಶೇಷಾದ್ರಿಯವರು ಯಾರ ಕಡೆ ? ಆಧುನಿಕ ಕೌರವರ ಕಡೆಯೋ ? ಆಧುನಿಕ ಪಾಂಡವರಾದ ರೈತಕೂಲಿಗಾರರು, ಕಾರ್ಮಿಕರ ಕಡೆಯೋ ?

ಕೇರಳದಲ್ಲಿ ಶೇಷಾದ್ರಿಯವರ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಬೆಳೆಯುತ್ತಿದೆಯಂತೆ! ಈ ಬೆಳವಣಿಗೆಯನ್ನು ಕಂಡು ಮಾರ್ಕ್ಸ್‌ವಾದಿಗಳು ಹೆದರಿದ್ದಾರಂತೆ!! ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿರುದ್ಧ ಸೈದ್ಧಾಂತಿಕ ಹೋರಾಟ ಮಾರ್ಕ್ಸ್‌ವಾದಿಗಳಿಂದ ಸಾಧ್ಯವಿಲ್ಲವಂತೆ!!! ಇವೆಲ್ಲಾ ಶ್ರೀ ಶೇಷಾದ್ರಿಯವರ ವಾದ. ತನ್ನ ಈ ವಾದಕ್ಕೆ ಸತ್ಯದ ರೂಪ ಕೊಡಲು ಶ್ರೀ ಶೇಷಾದ್ರಿಯವರು ಕೆ.ಪಿ.ಆರ್. ಗೋಪಾಲನ್, ಇಂದುಚೂಡನ್‌ರಂತಹವರ ಹೇಳಿಕೆಗಳನ್ನು ಉದ್ಧರಿಸಿದ್ದಾರೆ.

ಮಾರ್ಕ್ಸ್‌ವಾದಿ ವಿರೋಧ ಇಂದು ಕೇರಳದಲ್ಲಿ ಇಂದಿರಾಕಾಂಗ್ರೆಸ್. ರಾ. ಸ್ವ. ಸೇ. ಸಂಘ ಮತ್ತವರ ರಾಜಕೀಯ ಸಂಘಟನೆಯಾದ ಭಾ.ಜ.ಪ., ಕೋಯಾಲೀಗ್ ಮತ್ತು ನಕ್ಸಲಿಯರನ್ನು ಒಗ್ಗೂಡಿಸಿದೆ.

1969ರ ನಂತರ ಎಡ ಸಾಹಸವಾದಿಗಳನ್ನು ಮಾರ್ಕ್ಸ್‌ವಾದಿ ಪಕ್ಷದಿಂದ ಹೊರಹಾಕಿದಾಗ ಹೊರಹೋದವರಲ್ಲಿ ಕೆ.ಪಿ.ಆರ್. ಗೋಪಾಲನ್‌ರವರೂ ಒಬ್ಬರು. ಒಂದು ಕಾಲದಲ್ಲಿ ಕಮ್ಯುನಿಸ್ಟ್ ಚಳುವಳಿಯಲ್ಲಿ ಶ್ರೀ ಕೆ.ಪಿ.ಆರ್. ಗೋಪಾಲನ್ ಮಹತ್ವಪೂರ್ಣ ಪಾತ್ರವಹಿಸಿದ್ದಾರೆನ್ನುವುದರಲ್ಲಿ ಸಂಶಯವಿಲ್ಲ. ಅಂದು ಜನತೆಯು ಅವರನ್ನು ಪುರಸ್ಕರಿಸಿದ್ದರು. ಆದರೆ 1969ರ ನಂತರ ಅವರು ಎಡ ಸಾಹಸವಾದದ ಹಾದಿ ಹಿಡಿದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮ ಸಾಕಷ್ಟು ಕ್ರಾಂತಿಕಾರಿಯಾಗಿಲ್ಲವೆಂದು ಆರೋಪಿಸಿ ಎಡಸಾಹಸವಾದದ ದಾರಿ ಹಿಡಿದ ಗೋಪಾಲನ್‌ರವರು ತಪ್ಪುದಾರಿ ಹಿಡಿದದ್ದರಿಂದ ನಿರೀಕ್ಷಿತ ಫಲ ಸಿಗಲಿಲ್ಲ. ಇದರಿಂದ ಈಗ ನಿರಾಶೆ ಹೊಂದಿದ್ದಾರೆ. ಈ ನಿರಾಶೆಯೇ ಇಂದು ಅವರನ್ನು ಮಾರ್ಕ್ಸ್‌ವಾದಿ ಪಕ್ಷದ ಕುರುಡು ವಿರೋಧಿಯನ್ನಾಗಿ ಮಾಡಿದೆ. ಇಂದು ಮಾರ್ಕ್ಸ್‌ವಾದಿ ಪಕ್ಷದಿಂದಲೂ, ಮಾರ್ಕ್ಸ್‌ವಾದದಿಂದಲೂ ಮಾತ್ರವಲ್ಲ ಜನತೆಯಿಂದಲೂ ದೂರವಾಗಿದ್ದಾರೆ. ಕಳೆದ ಜನವರಿ ತಿಂಗಳಲ್ಲಿ ನಡೆದ ಚುನಾವಣೆಯಲ್ಲಿ ವಿಧಾನಸಭೆಗೆ ಸ್ಪರ್ಧಿಸಿ ಅವರು ಈಡುಗಂಟು (Deposit) ಕಳೆದುಕೊಂಡುದೇ ಇದಕ್ಕೆ ಸಾಕ್ಷಿ. ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷದ ಮೇಲಿನ ಕುರುಡುವಿರೋಧವೇ ಇನ್ನಿತರ ಅನೇಕ ಎಡ ಸಾಹಸವಾದಿಗಳಂತೆ ಅವರನ್ನು ಇಂದು ಆಳುವ ವರ್ಗಗಳ ಕೈಗೊಂಬೆಯನ್ನಾಗಿ ಮಾರ್ಪಡಿಸಿವೆ. ಆದ್ದರಿಂದಲೇ ಅವರು ಜನತೆಯಿಂದ ದೂರವಾಗುವ ಅಧೋಗತಿ ಅವರಿಗೆ ಒಂದೊದಗಿದೆ.

ಶ್ರೀ ಇಂದುಚೂಡನ್‌ರವರೂ ಒಂದು ಕಾಲದಲ್ಲಿ ದೇಶಾಭಿಮಾನಿಯ ಸಂಪಾದಕರಾಗಿದ್ದರು ನಿಜ. ಆನಂತರ ಪಕ್ಷದಿಂದ ದೂರವಾದರು. ಅವರೀಗ ರಾ. ಸ್ವ. ಸೇ. ಸಂಘದ ಅಭಿಮಾನಿಯಾಗಿದ್ದಾರೆ. ಆಶ್ಚರ್ಯವಿಲ್ಲ. ಏಕೆಂದರೆ ಮಾರ್ಕ್ಸ್‌ವಾದದ ಪಥದಿಂದ ಸ್ವಲ್ಪ ಎಡ ಅಥವಾ ಬಲಕ್ಕೆ ವ್ಯತಿಚಲಿಸಿದರೂ ಅಂತಹವರು ಕೊನೆಯಲ್ಲಿ ಬಂಡವಾಳಶಾಹಿ-ಭೂಮಾಲಕ ವರ್ಗಗಳ ಕೈಗೊಂಬೆಗಳಾಗಿ, ಕ್ರಾಂತಿವಿರೋಧಿಗಳಾಗಿ ಅಧಃಪತನಹೊಂದುತ್ತಾರೆನ್ನುವ ಚಾರಿತ್ರಿಕ ಸತ್ಯಕ್ಕೆ ಕೆ.ಪಿ.ಆರ್. ಗೋಪಾಲನ್, ಇಂದುಚೂಡನ್ ಜೀವಂತ ಸಾಕ್ಷಿಗಳಾಗಿದ್ದಾರೆ.

ಒಬ್ಬ ಇಂದುಚೂಡನ್ ರಾ.ಸ್ವ.ಸೇ. ಸಂಘದ ಪಾಳಯಕ್ಕೆ ಬಂದರೆಂದ ಮಾತ್ರಕ್ಕೆ ಅದು "ಹಿಂದು ಚಿಂತನೆಯ ಹಿರಿಮೆ"ಯನ್ನು ಎತ್ತಿ ಹಿಡಿಯುವುದೆಂದಿದ್ದಲ್ಲಿ ಶ್ರೀ ಶೇಷಾದ್ರಿಯವರ ಸಂಘದ ಚಿಂತನೆಗಿಂತಲೂ ಇಂದಿರಾ ಗಾಂಧಿಯ ಚಿಂತನೆ ಇನ್ನೂ ಶ್ರೇಷ್ಠವಾದದ್ದೆಂದು ಶ್ರೀ ಶೇಷಾದ್ರಿಯವರು ಒಪ್ಪಬೇಕಾಗುತ್ತದೆ. ಏಕೆಂದರೆ ಒಬ್ಬ ಇಂದುಚೂಡನ್ ರಾ.ಸ್ವ.ಸೇ. ಸಂಘದ ಪಾಳಯಕ್ಕೆ ಬಂದಿದ್ದರೆ ನೂರಾರು ಜನರು ಮಾರ್ಕ್ಸ್‌ವಾದಿ ಪಕ್ಷದಿಂದ ನಕ್ಸಲೀಯರೆಂದು ಕರೆಯಲ್ಪಡುವ

ಎಡಸಾಹಸವಾದಿಗಳಾದರು ಮತ್ತು ಕೇರಳ, ಆಂಧ್ರ, ಪ. ಬಂಗಾಳದಲ್ಲಿ ಇವರಲ್ಲಿ ಬಹುಸಂಖ್ಯಾತರು ಇಂದು ಇಂದಿರಾ ಪಾಳಯದಲ್ಲಿ ಸೇರಿ ಇಂದಿರಾ ಕಾಂಗ್ರೆಸ್ಸಿನ, ಬಂಡವಾಳಶಾಹಿ-ಭೂಮಾಲಕ ವರ್ಗಗಳ ಕೂಲಿಯಾಳುಗಳಂತೆ ವರ್ತಿಸುತ್ತಿದ್ದಾರೆ. ಆಗ ಶೇಷಾದ್ರಿಯವರ ಸಿದ್ಧಾಂತಕ್ಕಿಂತಲೂ ಇಂದಿರಾಕಾಂಗ್ರೆಸ್ಸಿನ ಸಿದ್ಧಾಂತ ಹಿರಿದಾದುದೆಂದು ಶೇಷಾದ್ರಿಯವರು ಒಪ್ಪುತ್ತಾರೆಯೇ?

ಒಂದು ಘಟ್ಟದಲ್ಲಿ ಕಮ್ಯುನಿಸ್ಟ್ ಚಳುವಳಿಯಲ್ಲಿ ಮಹತ್ವದ ಪಾತ್ರ ವಹಿಸುವವರು ಕೆಲವೊಮ್ಮೆ ಕಮ್ಯುನಿಸ್ಟ್ ಚಳುವಳಿಯ ಪಥದಿಂದ ಎಡ ಅಥವಾ ಬಲಕ್ಕೆ ವ್ಯತಿಚಲಿಸಿ ಹೋಗುವುದು; ಆನಂತರ ಬಂಡವಾಳಶಾಹಿ-ಭೂಮಾಲಕ ವರ್ಗಗಳ ಕೈಗೊಂಬೆಗಳಾಗಿ, ವರ್ಗ ವಂಚಕರಾಗಿ, ಕ್ರಾಂತಿ ವಿರೋಧಿಗಳಾಗಿ ವರ್ತಿಸುವುದು ಹೊಸತೇನಲ್ಲ. ರಷ್ಯದ ಕ್ರಾಂತಿಯ ಇತಿಹಾಸವನ್ನು ತೆಗೆದುಕೊಂಡಲ್ಲಿ ಭಾರತದಲ್ಲಿ ಇಂದುಚೂಡನ್, ಕೆ.ಪಿ. ಆರ್. ಗೋಪಾಲನ್‌ರ ಕೊಡುಗೆಗಿಂತಲೂ ಹೆಚ್ಚಿನ ಕೊಡುಗೆ ಇತ್ತ ಪ್ಲೆಖಾನೋವ್, ಟ್ರಾಟಸ್ಕಿಯಂತಹವರು ಕೊನೆಯಲ್ಲಿ ಮಾರ್ಕ್ಸ್‌ವಾದಿ ವಿರೋಧಿಗಳಾಗಿ ದುಡಿದದ್ದನ್ನು ಕಾಣಬಹುದು. ಆದರೆ ಅವರ ವರ್ಗವಂಚನೆಯಿಂದ ಅವರೇ ಜನತೆಯಿಂದ ದೂರವಾದರೇ ವಿನಹ ಕ್ರಾಂತಿಯ ಮುನ್ನಡೆಯನ್ನು ತಡೆಯಲು ಸಾಧ್ಯವಾಗಲಿಲ್ಲ. ಭಾರತದಲ್ಲೂ ಒಬ್ಬ ಇಂದುಚೂಡನ್ ರಾ.ಸ್ವ.ಸೇ. ಸಂಘದ ಪಾಳಯಕ್ಕೆ ಬಂದಿದ್ದರೆ ಎಸ್. ಎ. ಡಾಂಗೆಯವರಂತಹಾ ಕಮ್ಯುನಿಸ್ಟ್ ಚಳುವಳಿಯ ಸ್ಥಾಪಕರಲ್ಲೊಬ್ಬರು ಇಂದು ಇಂದಿರಾಗಾಂಧಿಯ ಆರಾಧಕರಾಗಿ ಮಾರ್ಪಟ್ಟಿದ್ದರೆನ್ನುವುದನ್ನು ಕಾಣಬಹುದು. ಮಾರ್ಕ್ಸ್‌ವಾದಿ ಪಕ್ಷದಿಂದ ಇಂದೇ ಕ್ರಾಂತಿ ಸಾಧಿಸಬೇಕೆಂಬ ಘೋಷಣೆಗಳೊಂದಿಗೆ ಎಡಸಾಹಸವಾದದ ಹಾದಿ ಹಿಡಿದವರನೇಕರು ಇಂದಿರಾ ಕಾಂಗ್ರೆಸ್ಸಿನ, ಬಂಡವಾಳಶಾಹಿ-ಭೂಮಾಲಕ ವರ್ಗಗಳ ಕೂಲಿಯಾಳುಗಳಾಗಿ ಮಾರ್ಪಟ್ಟಿರುವುದನ್ನು ಕಾಣಬಹುದು. ಆದರೆ ಇಂತಹವರಿಂದ ಭಾರತದಲ್ಲೂ ಕಮ್ಯುನಿಸ್ಟ್ ಚಳುವಳಿಯ ಮುನ್ನಡೆಯನ್ನು ತಡೆಯಲು ಸಾಧ್ಯವಿಲ್ಲ.

ಇ.ಎಂ.ಎಸ್. ನಂಬೂದಿರಿಪಾದ್, ಅಜಯ ಮುಖರ್ಜಿಯಂತಹಾ ದಿಗ್ಗಜಗಳು "ಭಾರತದಲ್ಲಿ ಕಮ್ಯುನಿಸ್ಟ್ ಆಂದೋಳನವು ಪರಾಭವಗೊಂಡಿರುವುದೇಕೆ?" ಎಂಬ ವಿಚಾರ ಸಂಕಿರಣ ಏರ್ಪಡಿಸಿ ತಮ್ಮ ಚಳುವಳಿಯ ಶವಚ್ಛೇದನವನ್ನು ಸಾಂಗವಾಗಿ ನೆರವೇರಿಸಿದರು" ಎನ್ನುತ್ತಾರೆ ಶ್ರೀ ಶೇಷಾದ್ರಿಯವರು.

ಶ್ರೀ ಶೇಷಾದ್ರಿಯವರೇ, ನೀವು ಹೇಳುವ ಈ ಅಜಯ ಮುಖರ್ಜಿ ಯಾರು? ಅವರ ಈ ವಿಚಾರ ಎಲ್ಲಿ ಪ್ರಕಟವಾಗಿದೆ? ದಯವಿಟ್ಟು ತಿಳಿಸುತ್ತೀರಾ?

"ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿ ಪರಾಭವಗೊಂಡಿದೆ" ಎಂದು ಇ. ಎಂ. ಎಸ್. ನಂಬೂದಿರಿಪಾಡ್ ಹೇಳಿದ್ದಾರೆಂಬ ಶ್ರೀ ಶೇಷಾದ್ರಿಯವರ ಮಾತು ಶುದ್ಧ ಸುಳ್ಳು. ಕಮ್ಯುನಿಸ್ಟ್ ಚಳುವಳಿಯ ಬೆಳವಣಿಗೆಯಲ್ಲಿ ಕೆಲವೊಮ್ಮೆ ನಿರ್ದಿಷ್ಟ ಸಮಸ್ಯೆಗಳನ್ನು ವಿಶ್ಲೇಷಿಸುವಲ್ಲಿ ತಪ್ಪುಗಳು ಬಂದಿವೆ ಎನ್ನುವುದನ್ನು ಎಲ್ಲ ಕಮ್ಯುನಿಸ್ಟರೂ ಒಪ್ಪುತ್ತಾರೆ. ಅಂತಹಾ ತಪ್ಪುಗಳನ್ನು ಸ್ವವಿಮರ್ಶಾತ್ಮಕ ದೃಷ್ಟಿಯಿಂದ ವಿಶ್ಲೇಷಿಸಿ ಒಪ್ಪಿಕೊಂಡು ತಿದ್ದಿಕೊಳ್ಳುವ ಪ್ರಾಮಾಣಿಕತೆಯನ್ನು ಮಾರ್ಕ್ಸ್‌ವಾದಿಗಳು ಎಂದಿಗೂ ತೋರಿಸಿದ್ದಾರೆ. ಆದರೆ "ಕಮ್ಯುನಿಸ್ಟ್ ಚಳುವಳಿ ಪರಾಭವಗೊಂಡಿದೆ" ಎಂದು ಆಂದೋಳನದ "ಶವಚ್ಛೇದನ"ವನ್ನು ಇ.ಎಂ.ಎಸ್. ನಂಬೂದಿರಿಪಾದ್ ಎಲ್ಲಿಯೂ ನಡೆಸಿಲ್ಲ. ಈ ಬಗ್ಗೆ ಶ್ರೀ ಶೇಷಾದ್ರಿಯವರಿಗೆ ಸವಾಲು ಹಾಕುತ್ತೇನೆ. ಇ.ಎಂ.ಎಸ್. ನಂಬೂದಿರಿಪಾದ್‌ರವರು "ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿ ಸೋತಿದೆ" ಎಂದು ಎಲ್ಲಿ ಹೇಳಿದ್ದಾರೆ ಶ್ರೀ ಶೇಷಾದ್ರಿಯವರೇ ತೋರಿಸಿಕೊಡಿ".

ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿ ಸೋತಿಲ್ಲ. 1964ರ ಕಲ್ಕತ್ತ ಅಧಿವೇಶನದ ನಂತರ ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷವು ಬಲ, ಆನಂತರ ಎಡ ವ್ಯತಿಚಲನಗಳ ವಿರುದ್ಧವೂ ವರ್ಗಶತ್ರುಗಳ ಬಹುಮುಖ ಆಕ್ರಮಣಗಳ ವಿರುದ್ಧವೂ ಎಲ್ಲಾ ರಂಗಗಳಲ್ಲೂ ಹೋರಾಡುತ್ತಾ ಅತ್ಯಂತ ಕಷ್ಟಕರವಾದ ದಿನಗಳನ್ನೆದುರಿಸುತ್ತಾ ಬೆಳೆದುಬಂದಿದೆ ಮತ್ತು ಅಭಿಮಾನಾರ್ಹವಾದ ಬೆಳವಣಿಗೆ ಸಾಧಿಸಿದೆ. ಇಂದು ದೇಶದ ಮುಂದೆ ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷ ತೋರಿಸುವ ದಾರಿಯೊಂದೇ ಸರಿಯಾದ ದಾರಿಯೆಂದು ಸ್ಪಷ್ಟವಾಗುತ್ತಿದೆ. ಆದ್ದರಿಂದಲೇ ಇಂದು ಮಾರ್ಕ್ಸ್‌ವಾದಿಗಳು ಹೆಚ್ಚು ಆತ್ಮಧೈರ್ಯದಿಂದ ಉತ್ಸಾಹದಿಂದ ದುಡಿಯುತ್ತಿದ್ದಾರೆ.

ತುರ್ತುಪರಿಸ್ಥಿತಿಯ ಕಾಲದಲ್ಲಿ ಮಾರ್ಕ್ಸ್‌ವಾದಿಗಳು ಏನೂ ಮಾಡಲಿಲ್ಲ ಎನ್ನುವುದು ಶ್ರೀ ಶೇಷಾದ್ರಿಯವರ ಮತ್ತೊಂದು ವಾದ. ತುರ್ತುಪರಿಸ್ಥಿತಿಯ ಕಾಲದಲ್ಲಿ ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷ ಹೊರಡಿಸುವ ದಸ್ತಾವೇಜುಗಳು ಹೇಳಿಕೆಗಳನ್ನು ಶ್ರೀ ಶೇಷಾದ್ರಿಯವರು ಅಧ್ಯಯನ ಮಾಡುತ್ತಿದ್ದರೆ ಅವರಿಗೆ ತುರ್ತುಪರಿಸ್ಥಿತಿಯಲ್ಲಿ ಮಾರ್ಕ್ಸ್‌ವಾದಿ ಪಕ್ಷದ ಚಟುವಟಿಕೆಗಳು ಅರಿವಾಗುತ್ತಿತ್ತು. ಆದರೆ ಅಧ್ಯಯನ ಮಾಡಿ ಅರ್ಥಮಾಡಿಕೊಳ್ಳುವ ಶಕ್ತಿ ಶ್ರೀ ಶೇಷಾದ್ರಿಯವರಿಗಿಲ್ಲ. ಅದಕ್ಕೆ ಮಾರ್ಕ್ಸ್‌ವಾದಿಗಳು ಜವಾಬ್ದಾರರೇ?

ತುರ್ತುಪರಿಸ್ಥಿತಿಯ ಕಾಲದಲ್ಲಿ ಇಂದಿರಾ ಸರ್ವಾಧಿಕಾರದ ವಿರುದ್ಧ ತಾವೇ ಹೋರಾಡಿದವರೆಂದು ಬಡಾಯಿ ಹೊಡೆಯುವ ಈ "ಕೋಗಿಲೆಗಳು" ಕೇರಳದಲ್ಲಿ ಕಳೆದ ಜನವರಿ ತಿಂಗಳಿನಿಂದಲೂ ಏನು ಕಲರವ ಹಾಡುತ್ತಿವೆ? ಜನತಾಪಕ್ಷದ ಒಳಜಗಳದಿಂದ ಅವರ ಅಧಿಕಾರ ಕುಸಿದು ಬಿದ್ದು ಲೋಕಸಭಾ ಚುನಾವಣೆ ಬಂದಾಗ ದೇಶದ ಉಳಿದ ಎಲ್ಲೆಡೆ ಇಂದಿರಾಕಾಂಗ್ರೆಸನ್ನು ವಿರೋಧಿಸುತ್ತೇವೆನ್ನುವ ಇವರು ಕೇರಳದಲ್ಲಿ "ಮಾರ್ಕ್ಸ್‌ವಾದಿಗಳ ಆಕ್ರಮಣ"ವನ್ನು ಎದುರಿಸುವ ಹೆಸರಿನಲ್ಲಿ ಇಂದಿರಾ ಪಾಳಯವನ್ನು ಸೇರಲು ಹಿಂಜರಿಯಲಿಲ್ಲ. ಕೇರಳದಲ್ಲಿ ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷದ ನೇತೃತ್ವದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಒಕ್ಕೂಟದ ವಿರುದ್ಧ ಇಂದಿರಾ ಕಾಂಗ್ರೆಸ್ ನೇತೃತ್ವದ ಬಲಪಂಥೀಯ ಶಕ್ತಿಗಳ ಕೂಟದಲ್ಲಿ ಬಹಿರಂಗವಾಗಿಯೇ ಸೇರಿಕೊಂಡರು. ಲೋಕಸಭೆಯ 20 ಸ್ಥಾನಗಳಲ್ಲಿ 6 ಸ್ಥಾನಗಳಲ್ಲಿ ಜನತಾಪಕ್ಷ ಸ್ಪರ್ಧಿಸಿತು. ಇಂದು ಭಾ. ಜ. ಪ. ಕೇರಳ ಘಟಕದ ಕಾರ್ಯದರ್ಶಿ ಶ್ರೀ ಒ. ರಾಜಗೋಪಾಲನ್ ಕಾಸರಗೋಡಿನಿಂದ ಈ ಕೂಟದ ಅಭ್ಯರ್ಥಿಯಾಗಿದ್ದರು. ಇಂದಿರಾ ಕಾಂಗ್ರೆಸ್ಸಿಗರೂ–ಭಾ. ಜ. ಪ.ವನ್ನೊಳಗೊಂಡ ಅಂದಿನ ಜನತಾಪಕ್ಷವೂ ಒಂದಾಗಿ ಮಾರ್ಕ್ಸ್‌ವಾದಿ ಪಕ್ಷದ ವಿರುದ್ಧ ಇಂದಿಗೂ ಶ್ರೀ ಶೇಷಾದ್ರಿಯವರು ನಡೆಸುತ್ತಿರುವ ಇದೇ ಅಪಪ್ರಚಾರಗಳನ್ನು ಅಂದೂ ನಡೆಸಿದರಾದರೂ; ದೇಶದಾದ್ಯಂತ ಇಂದಿರಾ ಗಾಳಿ ಬೀಸಿದಾಗಲೂ ಕೇರಳದಲ್ಲಿ ಇಂದಿರಾ ಕಾಂಗ್ರೆಸ್-ಜನತಾ ಕೂಟಕ್ಕೆ ಸೋಲಾಯಿತು.

ಇದಕ್ಕೆ ಮೊದಲೇ, ಕೇರಳದ ತಲಿಚೇರಿಯಲ್ಲಿ ನಡೆದ ಉಪಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಪಕ್ಷ ಮತ್ತು ಜನತಾಪಕ್ಷ ಒಂದೇ ಕೂಟದಲ್ಲಿದ್ದಾಗಲೂ, ಉಪಚುನಾವಣೆಯ ಪ್ರಚಾರ ಭಾಷಣದಲ್ಲಿ ಬಹಿರಂಗವಾಗಿಯೇ ಕಾಂ. ಇ. ಎಂ. ಎಸ್. ನಂಬೂದಿರಿಪಾಡ್‌ರವರು "ನಮಗೆ ರಾ. ಸ್ವ. ಸೇ. ಸಂಘದವರ ಮತ ಬೇಕಿಲ್ಲ, ಸಹಾಯಬೇಕಿಲ್ಲ" ಎಂದು ಬಹಿರಂಗವಾಗಿಯೇ ಘೋಷಿಸಿದ್ದರು. ಈ ಚುನಾವಣೆಯಲ್ಲಿ ರಾ. ಸ್ವ. ಸೇ. ಸಂಘದವರೂ ಮಾರ್ಕ್ಸ್‌ವಾದಿ ಪಕ್ಷದ ವಿರೋಧವಾಗಿ ಕೆಲಸ ಮಾಡಿದ್ದರು. ಹಾಗಿದ್ದರೂ ಆ ಉಪಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಪಕ್ಷದ ಅಭ್ಯರ್ಥಿ ಹೆಚ್ಚಿನ ಬಹುಮತದಿಂದ ಜಯಗಳಿಸಿದ್ದರು. ಅಂದರೆ ರಾ. ಸ್ವ. ಸೇ. ಸಂಘ ವಿರೋಧಿಸಿದ್ದರಿಂದ ಪಕ್ಷದ ಬೆಂಬಲ ಹೆಚ್ಚಿತು.

ಲೋಕಸಭಾ ಚುನಾವಣೆಯನಂತರ ಜನವರಿ ತಿಂಗಳಲ್ಲಿ ಕೇರಳ ವಿಧಾನಸಭೆಗೆ ಚುನಾವಣೆ ನಡೆಯಿತು. ಕೆಲವೇ ದಿನಗಳ ಹಿಂದೆ ನಡೆದ ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ಸಿಗೆ ದೇಶದ ಮಟ್ಟದಲ್ಲಿ ದೊರೆತ ಜಯದ ಹಿನ್ನೆಲೆಯಲ್ಲಿ ಕೇರಳದಲ್ಲಿ ನಡೆದ ಈ ಚುನಾವಣೆಯಲ್ಲಿ ಕೇರಳದಲ್ಲಿ ಇಂದಿರಾ ಕಾಂಗ್ರೆಸ್ ನೇತೃತ್ವದ ಕೂಟಕ್ಕೆ ಜಯಬರುವುದೆಂದು ಬಂಡವಾಳಶಾಹಿ-ಭೂಮಾಲೀಕವರ್ಗಗಳ ಪ್ರತಿನಿಧಿಗಳು ಅಹೋರಾತ್ರಿ ಪ್ರಚಾರ ನಡೆಸಿದರು. ಇಂದಿರಾ ಕಾಂಗ್ರೆಸ್, ರಾ. ಸ್ವ. ಸೇ. ಸಂಘವನ್ನೊಳಗೊಂಡ ಜನತಾಪಕ್ಷ, ಕೋಯಾಲೀಗ್ ಒಂದಾಗಿ ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷದ ಬಗ್ಗೆ, ಎಡ–ಪ್ರಜಾಸತ್ತಾತ್ಮಕ ಶಕ್ತಿಗಳ ಒಕ್ಕೂಟದ ಬಗ್ಗೆಯೂ ಸಾಕಷ್ಟು ಅಪಪ್ರಚಾರ ನಡೆಸಿದರೂ ಶ್ರೀ ಶೇಷಾದ್ರಿಯವರು ಈಗಲೂ ಪುನರುಚ್ಚರಿಸುತ್ತಿರುವ ಈ ಅಪಪ್ರಚಾರಗಳನ್ನೆಲ್ಲಾ ಅಂದೂ ಪ್ರಚಾರಮಾಡಲಾಗಿತ್ತು. ಆದರೆ ಶೋಷಕವರ್ಗಗಳ ಈ ಪ್ರತಿನಿಧಿಗಳ ಎಲ್ಲ ಅಪಪ್ರಚಾರಗಳಿಗೂ ಅರ್ಹವಾದ ಬೆಲೆಯಿತ್ತು. ಕೇರಳದ ಜನತೆ ಭಾರತ ಕಮ್ಯುನಿಸ್ಟ್(ಮಾರ್ಕ್ಸ್‌ವಾದಿ) ಪಕ್ಷದ ಮುಖಂಡತ್ವದ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳ ಒಕ್ಕೂಟಕ್ಕೆ ಭಾರಿ ಜಯ ತಂದುಕೊಟ್ಟರು. ಜನತಾಪಕ್ಷಕ್ಕೆ 5 ಸ್ಥಾನಗಳು ಸಿಕ್ಕಿದುವಾದರೂ ರಾ. ಸ್ವ. ಸೇ. ಸಂಘದ ಹಿನ್ನೆಲೆಯುಳ್ಳ ಒಬ್ಬನೂ ಜಯಗಳಿಸಲಿಲ್ಲವೆನ್ನುವುದು ಗಮನಾರ್ಹ. ಹೀಗೆ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯರಂಗ ಅಧಿಕಾರಕ್ಕೆ ಬಂದು 6 ತಿಂಗಳಲ್ಲಿ ನೀಲಂಬೂರಿನಲ್ಲಿ ಉಪಚುನಾವಣೆ ಬಂದಿತು. ಅಲ್ಲಿ ಮತ್ತೆ ಅದೇ ಇಂದಿರಾ ಕಾಂಗ್ರೆಸ್ ನೇತೃತ್ವದ ಪ್ರತಿಗಾಮಿಕೂಟ ಮತ್ತೆ ಎಲ್ಲಾ ರೀತಿಯ ಅಪಪ್ರಚಾರಗಳನ್ನು ನಡೆಸಿದರು. ಇಂದಿರಾ ಕಾಂಗ್ರೆಸ್ಸಿನ ಮುಖಂಡ ಸ್ಟೀಫನ್ "ನೀಲಂಬೂರಿನಲ್ಲಿ ಎಡ-ಪ್ರಜಾಸತ್ತಾತ್ಮಕ ಶಕ್ತಿಗಳ ಒಕ್ಕೂಟದ ಪ್ರತಿನಿಧಿ ಸೋತರೆ ಕೇರಳ ಸರಕಾರ ರಾಜೀನಾಮೆ ಕೊಡಬೇಕು" ಎಂದು ಘರ್ಜಿಸಿದರು. ಇಲ್ಲಿಯೂ ರಾ. ಸ್ವ. ಸೇ. ಸಂಘ "ಮಾರ್ಕ್ಸ್‌ವಾದಿಗಳನ್ನು ಸೋಲಿಸುವ" ಹೆಸರಿನಲ್ಲಿ ಇಂದಿರಾ ಪಾಳೆಯದಲ್ಲಿ ಸೇರಿಕೊಳ್ಳಲು ಹಿಂಜರಿಯಲಿಲ್ಲ. ಆದರೆ ಚುನಾವಣೆಯ ಫಲಿತಾಂಶ ಹೊರಬಂದಾಗ ಎಡ-ಪ್ರಜಾಸತ್ತಾತ್ಮಕ ಶಕ್ತಿಗಳ ಪ್ರತಿನಿಧಿ ಜನವರಿ ತಿಂಗಳಲ್ಲಿ ಪಡೆದ ಬಹುಮತಕ್ಕಿಂತ ಹೆಚ್ಚಿನ ಬಹುಮತ ಪಡೆದು ಜಯಶೀಲರಾಗಿದ್ದರು.

ಇತ್ತೀಚೆಗೆ ಪಂಚಾಯತು-ನಗರಸಭೆಗಳಿಗೆ ನಡೆದ ಚುನಾವಣೆಯಲ್ಲಿ ಮತ್ತೆ ಇಂದಿರಾ ಕಾಂಗ್ರೆಸ್ ರಾ. ಸ್ವ. ಸೇ. ಸಂಘ-ಕೋಯಾಲೀಗ್ ಕೂಟಕ್ಕೆ ಭಾರಿ ಸೋಲನ್ನನುಭವಿಸಬೇಕಾಯಿತು.

ಹೀಗೆ ಪ್ರತಿ ಚುನಾವಣೆಯಲ್ಲೂ ಭಾರಿ ಸೋಲನ್ನನುಭವಿಸುತ್ತಿರುವ ಇ. ಕಾಂಗ್ರೆಸ್ - ರಾ.ಸ್ವ.ಸೇ. ಸಂಘ-ಕೋಯಾಲೀಗ್ ಕೂಟ ಬೆಳೆಯುತ್ತಿವೆಯಂತೆ! ಎಲ್ಲ ಅಪಪ್ರಚಾರಗಳನ್ನೂ ಎದುರಿಸಿ ಬೆಳೆಯುತ್ತಿರುವ ಎಡ-ಪ್ರಜಾಸತ್ತಾತ್ಮಕ ರಂಗ ದುರ್ಬಲವಾಗುತ್ತಿದೆಯಂತೆ! ಇದು ಶ್ರೀ ಶೇಷಾದ್ರಿಯವರ ವಾದದ ವೈಖರಿ!

ಹೀಗೆ ಚುನಾವಣೆಗಳ ಮೂಲಕ ಕೇರಳದಲ್ಲಿ ಮಾರ್ಕ್ಸ್‌ವಾದಿ ಪಕ್ಷದ ನೇತೃತ್ವದಲ್ಲಿರುವ ಎಡ-ಪ್ರಜಾಸತ್ತಾತ್ಮಕ ರಂಗದ ಸರಕಾರವನ್ನು ಚುನಾವಣೆಗಳ ಮೂಲಕ ಸೋಲಿಸುವುದು ಸಾಧ್ಯವಿಲ್ಲವೆಂದು ಇಂದಿರಾ ಕಾಂಗ್ರೆಸ್ ರಾ. ಸ್ವ. ಸಂಘದ ಕೂಟಕ್ಕೆ ಅರಿವಾಗಿದೆ. ಆದ್ದರಿಂದಲೇ ಅವರು ಇಂದು ಕೇರಳದಲ್ಲಿ ಗೂಂಡಾ ಆಕ್ರಮಣಗಳನ್ನು ಪ್ರಾರಂಭಿಸಿದ್ದಾರೆ. ಈ ವಾಸ್ತವತೆಯನ್ನು ಮರೆಮಾಚಲು ಶ್ರೀ ಶೇಷಾದ್ರಿಯವರು ಸುಳ್ಳು ಹೇಳುತ್ತಿದ್ದಾರೆ. ಆದರೆ ಶೇಷಾದ್ರಿಯವರ ಸುಳ್ಳನ್ನು ತಿಳಿದುಕೊಳ್ಳಲಾರದಷ್ಟು ಮೂರ್ಖರು ಈ ನಾಡಿನ ಜನರಲ್ಲ ಎಂಬ ವಿಶ್ವಾಸ ನಮಗಿದೆ.

"ದೇವರ ಬಗ್ಗೆ "ತಾತ್ವಿಕ ರಾಜಿ" ಮಾಡಿಕೊಳ್ಳುತ್ತಿದ್ದಾರೆ ಕಮ್ಯುನಿಸ್ಟರು" ಎನ್ನುತ್ತಿದ್ದಾರೆ ಶ್ರೀ ಶೇಷಾದ್ರಿಯವರು. 'ದೇವರ' ಬಗ್ಗೆ ಕಮ್ಯುನಿಸ್ಟರಿಗೆ ಖಚಿತ ನಿಲುವು ಇದೆ. ಮನುಷ್ಯನ ಅರಿವಿಗೆ ಅತೀತವಾದ ಒಂದು ಶಕ್ತಿ ಇದೆ ಎಂದು ಕಮ್ಯುನಿಸ್ಟರು ನಂಬುವುದಿಲ್ಲ. ಆದರೆ ತಮ್ಮ ಆರ್ಥಿಕ-ರಾಜಕೀಯ ಕಾರ್ಯಕ್ರಮವನ್ನು ಬೆಂಬಲಿಸುವ ರೈತರು, ಕಾರ್ಮಿಕರು ಮೊದಲಾದ ದುಡಿಯುವ ಜನವಿಭಾಗಗಳಲ್ಲಿ ದೇವರ ಬಗ್ಗೆ ನಂಬಿಕೆಯೇ ಮೊದಲಾದ ಅಂಧಶ್ರದ್ಧೆಗಳು ಇರುತ್ತವೆ ಎಂದು ಅವು ಅಷ್ಟು ಬೇಗನೇ ಹೋಗಲಾರವೆಂಬುದನ್ನು ಕಮ್ಯುನಿಸ್ಟರು ಮೊದಲೇ ತಿಳಿದಿದ್ದಾರೆ. ಜನತೆಯಲ್ಲಿರುವ ಈ ಅಂಧಶ್ರದ್ಧೆಗಳಿಗೆ ನಿರ್ದಿಷ್ಟವಾದ ರಾಜಕೀಯ, ಆರ್ಥಿಕ, ಸಾಮಾಜಿಕ ಕಾರಣಗಳಿವೆ. ಬಂಡವಾಳಶಾಹಿ-ಪಾಳೆಯಗಾರಿ ವ್ಯವಸ್ಥೆಯೇ ಮೂಲ ಕಾರಣ. ಈ ವ್ಯವಸ್ಥೆಯನ್ನು ಕೊನೆಗೊಳಿಸಿ ಸಮಾಜವಾದಿ-ಸಾಮ್ಯವಾದಿ ವ್ಯವಸ್ಥೆಯನ್ನು ಕಟ್ಟಿಬೆಳೆಸುವ ಪ್ರಕ್ರಿಯೆಯಲ್ಲಿ ಜನತೆ ಸಕ್ರಿಯವಾಗಿ ಹೋರಾಡುತ್ತಾ ಮುಂದುವರಿಯುವಾಗ ಈ ಭ್ರಮೆಗಳು ಹಂತಹಂತವಾಗಿ ಮುರಿದು ಬೀಳುತ್ತವೆ. ಆದ್ದರಿಂದಲೇ ಕಮ್ಯುನಿಸ್ಟರು ಬಂಡವಾಳಶಾಹಿ-ಭೂಮಾಲೀಕ ವ್ಯವಸ್ಥೆಯ ವಿರುದ್ಧ ಆರ್ಥಿಕ-ರಾಜಕೀಯ-ಸಾಂಸ್ಕೃತಿಕ ಹೋರಾಟಕ್ಕಾಗಿ ಜನತೆಯನ್ನು ಅಣಿಗೊಳಿಸುವ ಕೆಲಸದಲ್ಲಿ ಮಗ್ನರಾಗಿದ್ದಾರೆ. ಮಾರ್ಕ್ಸ್‌ವಾದದ ತಿಳುವಳಿಕೆ ಇಲ್ಲದ ಶ್ರೀ ಶೇಷಾದ್ರಿಯವರಿಗೆ ಇದು "ತಾತ್ವಿಕ ರಾಜಿ"ಯಾಗಿ ಕಂಡರೆ ಶೇಷಾದ್ರಿಯವರ ಅಜ್ಞಾನಕ್ಕೆ ಕಮ್ಯುನಿಸ್ಟರು ಕಾರಣರಲ್ಲ.

ಶ್ರೀ ಶೇಷಾದ್ರಿಯವರು ಶ್ರೀ ವಿ. ಆರ್. ಕೃಷ್ಣಯ್ಯರ್‌ರವರ ಬಗ್ಗೆ ಹೇಳಿದ್ದಾರೆ. 1957ರಲ್ಲಿ ಕೇರಳದ ಕಮ್ಯುನಿಸ್ಟ್ ಮಂತ್ರಿಮಂಡಲದಲ್ಲಿ ಶ್ರೀ ವಿ. ಆರ್. ಕೃಷ್ಣಯ್ಯರ್‌ರವರು ಇದ್ದಾಗಲೂ ಅವರು ಪಕ್ಷದ ಸದಸ್ಯರಾಗಿರಲಿಲ್ಲ. ಅವರು ಪಕ್ಷದ ಬೆಂಬಲದಿಂದ ಚುನಾಯಿತರಾದ ಸ್ವತಂತ್ರ ಅಭ್ಯರ್ಥಿಯಾಗಿದ್ದರು. ಅಂದರೆ ಅಂದೂ ಅವರು ಮಾರ್ಕ್ಸ್‌ವಾದಿಯಾಗಿರಲಿಲ್ಲ. ಅಂದರೆ ಅಂದೂ ದೇವರು, ಧರ್ಮಗಳ ಬಗ್ಗೆ ಅವರ ನಿಲುವು ಮತ್ತು ಕಮ್ಯುನಿಸ್ಟರ ನಿಲುವು ಒಂದೇ ಆಗಿರಲಿಲ್ಲ. ಆದರೆ ಆರ್ಥಿಕ, ರಾಜಕೀಯ, ಸಾಮಾಜಿಕರಂಗಗಳಲ್ಲಿ ಕಮ್ಯುನಿಸ್ಟರೊಂದಿಗೆ ಸಹಕರಿಸಿ ದುಡಿಯಲು

ಅವರು ಸಿದ್ಧರಿದ್ದರಿಂದ ಅವರನ್ನು ಸ್ವತಂತ್ರ ಅಭ್ಯರ್ಥಿಯಾಗಿ ಕಮ್ಯುನಿಸ್ಟರು ಬೆಂಬಲಿಸಿದ್ದರು.

"ದೀನದಲಿತರ" 'ಹಿಂದುಳಿದ ಕೋಮಿನ' ಸಹಾಯಕರು ರಾ. ಸ್ವ. ಸೇ. ಸಂಘ ಎನ್ನುತ್ತಾರೆ ಶ್ರೀ ಶೇಷಾದ್ರಿಯವರು. 'ದಲಿತರ' ಮನೆಗಳಲ್ಲಿ ಒಂದಾಗಿ ಕುಳಿತು ಊಟಮಾಡುವುದನ್ನು ಇದಕ್ಕೆ ಸಾಕ್ಷಿ ಇತ್ತಿದ್ದಾರೆ. ಅಂತೂ ಅಷ್ಟರಮಟ್ಟಿಗಾದರೂ ಮನುಸ್ಮೃತಿಯನ್ನು ಕಸದ ಬುಟ್ಟಿಗೆಸೆಯಬೇಕೆಂದು ಶ್ರೀ ಶೇಷಾದ್ರಿಯವರು ಒಪ್ಪಿಕೊಳ್ಳುತ್ತಾರಲ್ಲಾ? ಸಂತೋಷ. ಆದರೆ ಶ್ರೀ ಶೇಷಾದ್ರಿಯವರೇ, ಚಾರಿತ್ರಿಕವಾಗಿ ಜನತೆಯ ಒಂದು ವಿಭಾಗವನ್ನು ಶೂದ್ರರೆಂದು ಮುದ್ರೆಯೊತ್ತಲು ಕಾರಣವೇನು? ಇಂದಿಗೂ ಗ್ರಾಮಾಂತರ ಪ್ರದೇಶಗಳಲ್ಲಿ "ಶೂದ್ರರೇ" ಅಧಿಕಸಂಖ್ಯೆಯಲ್ಲಿ ಕೃಷಿಕೂಲಿಗಾರರಲ್ಲವೇ? ಹಗಲಿರುಳು ದುಡಿಯುವವರು ಕೃಷಿಕೂಲಿಕಾರರಲ್ಲವೇ? ಹಗಲಿರುಳು ದುಡಿಯುವ ಕೃಷಿಕೂಲಿಕಾರರಾದ ಇವರ ಸ್ಥಿತಿ ಸುಧಾರಿಸಿಲ್ಲ. ದುಡಿಯದ ಭೂಮಾಲಕ ಜೀವನದ ಸೌಲಭ್ಯಗಳನ್ನೆಲ್ಲಾ ಅನುಭವಿಸುತ್ತಾ ಸುಖವನ್ನನುಭವಿಸುತ್ತಿದ್ದಾನೆ. ಹೆಚ್ಚಿನ ಭೂಮಾಲಕರು 'ಮೇಲ್ಜಾತಿ'ಗೆ ಸೇರಿದವರು. ಈ ವೈಪರೀತ್ಯದ ಹಿನ್ನೆಲೆ ಏನು? ಇಂದೂ ಕಿಲ್ವೆನ್ಮಣಿ, ಬೆಲ್ಚಿಗಳಲ್ಲಿ ನಡೆದ ಸಂಭವಗಳು ಆವರ್ತಿಸುತ್ತಿಲ್ಲವೇ? 'ಕೆಳಜಾತಿ'ಯವರೆನ್ನಲಾದವರ ಮನೆಗಳಲ್ಲಿ ಊಟಮಾಡುವುದೇನೋ ಸರಿ. ಆದರೆ ಅಷ್ಟರಿಂದಲೇ ಅವರ ಮೇಲಿನ ಶೋಷಣೆ ಕೊನೆಗೊಳ್ಳುವುದೇ? ಪರೋಪಜೀವಿಗಳಾಗಿ ಜೀವಿಸುತ್ತಿರುವ ದೊಡ್ಡ ಭೂಮಾಲೀಕರ ಭೂಮಿಯನ್ನು ವಶಪಡಿಸಿಕೊಂಡು ಹರಿಜನ-ಗಿರಿಜನರಿಗೆ ಹಂಚದೇ; ಪಾಳೆಯಗಾರಿ ಹಾಗೂ ಬಂಡವಾಳಶಾಹಿ ಭೂಮಾಲೀಕ ವ್ಯವಸ್ಥೆಯನ್ನು ಮುರಿಯದೇ 'ಹರಿಜನ' ಅಥವಾ 'ದಲಿತ'ರಾದ ಕೃಷಿಕಾರ್ಮಿಕರ ಸಮಸ್ಯೆ ಬಗೆಹರಿಯುವುದೇ? ಭೂಮಾಲೀಕರ ಭೂಮಿ ಕಿತ್ತು ಕೃಷಿಕೂಲಿಗಾರರಿಗೆ ಹಂಚಬೇಕೆನ್ನುವ ಘೋಷಣೆಕೊಟ್ಟು ಹೋರಾಟಕ್ಕೆ ಶ್ರೀ ಶೇಷಾದ್ರಿಯವರೂ ಅವರ ಸಂಘಟನೆಯೂ ಸಿದ್ಧವಿದೆಯೇ?

ಮಾರ್ಕ್ಸ್‌ವಾದಕ್ಕಿಂತಲೂ ರಾ. ಸ್ವ. ಸೇ. ಸಂಘದ "ಹಿಂದೂ ಸಿದ್ಧಾಂತ"ವೇ ಮೇಲಾದದ್ದೆಂದು ಶ್ರೀ ಶೇಷಾದ್ರಿಯವರ ಅಭಿಪ್ರಾಯ. ನಮ್ಮ ದೇಶ ಎದುರಿಸುತ್ತಿರುವ ಆರ್ಥಿಕ, ರಾಜಕೀಯ, ಸಾಮಾಜಿಕ ಸಮಸ್ಯೆಗಳಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಿರ್ದಿಷ್ಟ, ಸ್ಪಷ್ಟ ಕಾರ್ಯಕ್ರಮವಿದೆ. ರಾ. ಸ್ವ. ಸೇ. ಸಂಘಕ್ಕಿದೆಯೇ? ಇದ್ದರೆ ಅದೇನು?

ವಿದೇಶೀ ಬಂಡವಾಳದ ರಾಷ್ಟ್ರೀಕರಣ ಮಾಡದೇ, ಗುತ್ತೇದಾರಿ ಬಂಡವಾಳಶಾಹಿಗಳ ಸಂಪತ್ತಿನ ರಾಷ್ಟ್ರೀಕರಣ ಮಾಡದೇ, ಹಿರಿಯ ಭೂಮಾಲೀಕರ ಭೂಮಿಯನ್ನು ಕಿತ್ತುಕೊಂಡು ಕೃಷಿಕೂಲಿಗಾರರಿಗೆ ಧರ್ಮಾರ್ಥ ಹಂಚದೇ ದೇಶದ ಯಾವುದೇ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವೇ?

ನಮ್ಮ ದೇಶದ ಆರ್ಥಿಕತೆಯನ್ನು ಸೂರೆಮಾಡುತ್ತಿರುವ ವಿದೇಶಿ ಕಂಪನಿಗಳನ್ನು ರಾಷ್ಟ್ರೀಕರಿಸಬೇಕೆಂದು ಘೋಷಣೆಕೊಟ್ಟು ಅದಕ್ಕಾಗಿ ಜನರನ್ನು ಸಂಘಟಿಸಲು ರಾ. ಸ್ವ. ಸೇ. ಸಂಘ ಸಿದ್ಧವಿದೆಯೇ?

"ರಾ. ಸ್ವ. ಸೇ. ಸಂಘವನ್ನು ತಲಿಚೇರಿಯ ನೆಲದಿಂದ ನಿರ್ನಾಮಗೊಳಿಸಲು ಹೊರಟಿದ್ದ ಮಾರ್ಕ್ಸ್‌ವಾದಿಗಳು ಒಮ್ಮಿಂದೊಮ್ಮೆಗೇ ಶಾಂತಿಮಂತ್ರ ಪಠಿಸಲು ಆರಂಭಿಸಿದ್ದರು. ಒಳರಹಸ್ಯವೇನಿರಬಹುದು?" ಎಂದು ಶ್ರೀ ಶೇಷಾದ್ರಿಯವರು ತನ್ನ ಲೇಖನದಲ್ಲಿ ಪ್ರಶ್ನಿಸಿದ್ದಾರೆ.

ಮೊದಲನೆಯದಾಗಿ, ರಾ.ಸ್ವ.ಸೇ. ಸಂಘವನ್ನು ದೈಹಿಕಾಕ್ರಮಣದ ಮೂಲಕ ಕೊನೆಗೊಳಿಸುವ ಅಭಿಪ್ರಾಯವೇ ಮಾರ್ಕ್ಸ್‌ವಾದಿಗಳಿಗೆ ಇರಲಿಲ್ಲ. ಇಂದಿರಾ ಕಾಂಗ್ರೆಸ್ಸಿನೊಂದಿಗೆ ಸೇರಿಕೊಂಡು ಅದೆಷ್ಟು ಅಪಪ್ರಚಾರ ನಡೆಸಿದರೂ ಚುನಾವಣೆಗಳಲ್ಲಿ ಸೋಲಾದಾಗ ನಿರಾಶೆಗೊಂಡ ರಾ. ಸ್ವ. ಸೇ. ಸಂಘ – ಇಂದಿರಾ ಕಾಂಗ್ರೆಸ್ ಕೂಟವೇ ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷದ ಕಾರ್ಯಕರ್ತರ ಮೇಲೆ ಆಕ್ರಮಣ ಆರಂಭಿಸಿದರು. ಈ ಬಲಪಂಥೀಯ ಕೂಟದ ಬುದ್ಧಿಯನ್ನು ಸರಿಯಾಗಿಯೇ ಅರ್ಥಮಾಡಿಕೊಂಡಿದ್ದ ಕಾಂ. ಇ.ಕೆ. ನಾಯನಾರ್ ಕೇರಳದ ಮುಖ್ಯಮಂತ್ರಿಯಾಗಿ ಪದವಿ ಸ್ವೀಕರಿಸಿದ ದಿನವೇ ತಿರುವನಂತಪುರದಲ್ಲಿ ಬೃಹತ್ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಾ ಪಕ್ಷದ ಕಾರ್ಯಕರ್ತರಿಗೆ "ನಮ್ಮ ವಿರೋಧಿಗಳು ತಮಗಾದ ಸೋಲಿನಿಂದ ನಿರಾಶೆಗೊಂಡು, ಬುದ್ಧಿಸ್ಥಿಮಿತ ಕಳೆದುಕೊಂಡು ಆಕ್ರಮಣಾಸಕ್ತರಾಗಿ ವರ್ತಿಸಬಹುದು. ಆದರೆ ನಾವು ಅವರ ಮನೋಸ್ಥಿತಿಯನ್ನು ಅರಿತುಕೊಂಡು ಸಂಯಮದಿಂದ ವರ್ತಿಸಬೇಕು" ಎಂದು ಉಪದೇಶವಿತ್ತಿದ್ದರು. ಹಾಗಿದ್ದರೂ ರಾ.ಸ್ವ.ಸೇ. ಸಂಘ–ಇ. ಕಾಂಗ್ರೆಸ್ ಕಾರ್ಯಕರ್ತರು ತಮ್ಮ ಮೇಲೆ ಆಕ್ರಮಣ ಪ್ರಾರಂಭಿಸಿದಾಗ ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷದ ಕಾರ್ಯಕರ್ತರು ಹಿಂದೇಟು ಕೊಡುವುದು ಅನಿವಾರ್ಯವಾಯಿತು. ಹೀಗೆ ಹಿಂದೇಟು ಬಿದ್ದಾಗ "ನಮ್ಮ ಮೇಲೆ ಮಾರ್ಕ್ಸ್‌ವಾದಿಗಳು ಆಕ್ರಮಣ ನಡೆಸುತ್ತಿದ್ದಾರೆ" ಎಂದು ರಾ.ಸ್ವ.ಸೇ. ಸಂಘದ ಮುಖಂಡರು ಬೊಬ್ಬಿಡಲಾರಂಭಿಸಿ "ಕೇಂದ್ರ ಸರಕಾರ ಹಸ್ತಕ್ಷೇಪ ನಡೆಸಬೇಕೆಂದು" ಕೂಗೆಬ್ಬಿಸಿದರು. ಇದರಿಂದ ಇ. ಕಾಂಗ್ರೆಸ್–ರಾ.ಸ್ವ.ಸೇ. ಸಂಘದ ಉದ್ದೇಶ ಸ್ಪಷ್ಟವಾಗುತ್ತದೆ. ಮಾರ್ಕ್ಸ್‌ವಾದಿ ಪಕ್ಷದ ನೇತೃತ್ವದ ಕೂಟವನ್ನು ಚುನಾವಣೆಯಲ್ಲಂತೂ ಸೋಲಿಸಲು ಸಾಧ್ಯವಿಲ್ಲ. ಆದ್ದರಿಂದ ಕಾನೂನು-ವ್ಯವಸ್ಥೆಯ ಬೊಬ್ಬಿಟ್ಟು ಕೇಂದ್ರಸರಕಾರದಿಂದ ಕೇರಳ ಸರಕಾರವನ್ನು ವಜಾಮಾಡಿಸುವುದು ಇವರ ಉದ್ದೇಶವೆನ್ನುವುದು ಸ್ಪಷ್ಟ.

ಆದರೆ ರಾ. ಸ್ವ. ಸೇ. ಸಂಘದ ಸಾಮಾನ್ಯ ಸ್ವಯಂ ಸೇವಕರು ತಪ್ಪುತಿಳುವಳಿಕೆಯಿಂದ ಮಾರ್ಕ್ಸ್‌ವಾದವನ್ನು-ಮಾರ್ಕ್ಸ್‌ವಾದಿಗಳನ್ನು ವಿರೋಧಿಸುತ್ತಿದ್ದಾರೆ. ಅವರ ಮಧ್ಯೆ ತಾಳ್ಮೆಯಿಂದ ಕೆಲಸಮಾಡಿದಲ್ಲಿ ಅವರಲ್ಲಿ ಬಹುಸಂಖ್ಯಾತರು ತಮ್ಮ ವಿರೋಧವನ್ನು ಬಿಡುತ್ತಾರೆ" ಎನ್ನುವುದು ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷದ ನಂಬಿಕೆ. ಆದ್ದರಿಂದಲೇ ಗುಂಬಿಯ ಮೇಲೆ ಬ್ರಹ್ಮಾಸ್ತ್ರ ಪ್ರಯೋಗ ಬೇಡವೆಂದೂ, ಪಕ್ಷದ ಕಾರ್ಯಕರ್ತರಿಗೆ ಸಂಯಮ ಕಳೆದುಕೊಳ್ಳದಿರಲೂ ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷದ ಮುಖಂಡತ್ವ ಆದೇಶ ನೀಡಿದೆ. ರಾ. ಸ್ವ. ಸೇ. ಸಂಘದ ಮುಖಂಡರು ಇಂದಿರಾ ಕಾಂಗ್ರೆಸ್‌ನೊಂದಿಗೆ ಸೇರಿ ನಡೆಸುವ ಗೂಂಡಾಗಿರಿಗೆ ಮಾರ್ಕ್ಸ್‌ವಾದಿಗಳು ಹೆದರಿದ್ದಾರೆಂದು ಶ್ರೀ ಹೊ.ವೆ. ಶೇಷಾದ್ರಿಯವರು ಇದನ್ನು ವ್ಯಾಖ್ಯಾನಿಸುವುದಾದರೆ ಶ್ರೀ ಶೇಷಾದ್ರಿಯವರು ಮೂರ್ಖರ ಜಗತ್ತಿನಲ್ಲಿ ವಿಹರಿಸುತ್ತಿರುವರೆಂದು ಹೇಳದಿರಲು ಸಾಧ್ಯವಿಲ್ಲ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳ, ನೆಹರೂವಿನಿಂದಾರಂಭಿಸಿ ಇಂದಿರಾಗಾಂಧಿಯವರೆಗೆ ಎಲ್ಲಾ ಗುತ್ತೇದಾರಿ ಬಂಡವಾಳಶಾಹಿ–ಭೂಮಾಲೀಕವರ್ಗಗಳ ಪ್ರತಿನಿಧಿಗಳ ಆಳ್ವಿಕೆಯಲ್ಲೂ ಕ್ರೂರ ದಬ್ಬಾಳಿಕೆ, ಆಕ್ರಮಣಗಳನ್ನೆದುರಿಸಿ ಬೆಳೆಯುತ್ತಿರುವ ಕಮ್ಯುನಿಸ್ಟ್ ಚಳುವಳಿಯು ರಾ. ಸ್ವ. ಸೇ. ಸಂಘದ ಗೂಂಡಾಧಾಳಿಗೆ ಹೆದರುವರೆಂಬ ಭ್ರಮೆ ಯಾರಿಗೂ ಬೇಡ.

ರಾ. ಸ್ವ. ಸೇ. ಸಂಘದ ವಿರುದ್ಧ ಸೈದ್ಧಾಂತಿಕ ಹೋರಾಟ ಸಾಧ್ಯವಿಲ್ಲ ಎನ್ನುತ್ತಾರೆ ಶ್ರೀ ಶೇಷಾದ್ರಿಯವರು. ಶೇಷಾದ್ರಿಯವರು ರಾ. ಸ್ವ. ಸೇ. ಸಂಘದ ಸಾಮಾನ್ಯ ಕಾರ್ಯಕರ್ತರಲ್ಲ. ಹಿರಿಯ ಮುಖಂಡರಲ್ಲೊಬ್ಬರು. ಮಾರ್ಕ್ಸ್‌ವಾದದ ಪ್ರಾಥಮಿಕ ಜ್ಞಾನವಿರುವವನಿಗೂ ಶ್ರೀ ಶೇಷಾದ್ರಿಯವರ ತಿಳುವಳಿಕೆಯ ಟೊಳ್ಳುತನ ಅರಿವಾಗುತ್ತದೆ. ಹಾಗಿರುವಾಗ ಇಂತಹವರ ಮುಖಂಡತ್ವದಲ್ಲಿರುವ ಸಂಘಟನೆಯ ವಿರುದ್ಧ ಸೈದ್ಧಾಂತಿಕ ಹೋರಾಟ ಸಾಧ್ಯವಿಲ್ಲವಂತೆ! ಹೀಗೆನ್ನುವ ಶೇಷಾದ್ರಿಯವರ ಎದೆಗಾರಿಕೆ ಮೆಚ್ಚತಕ್ಕದ್ದೇ!

ಶ್ರೀ ಶೇಷಾದ್ರಿಯವರ ಲೇಖನಮಾಲೆಯಲ್ಲಿ ಒಂದು ಅಂಶವನ್ನು ಮಾತ್ರ ಸಂಪೂರ್ಣ ಒಪ್ಪುತ್ತೇನೆ ಅದೆಂದರೆ, ಶ್ರೀ ಶೇಷಾದ್ರಿಯವರು ಕೇರಳದ ಜನತೆಯನ್ನು "ಹುಲಿಯ ಹಾಲನ್ನು ಮೆದ್ದವರು" ಎಂದು ಹೊಗಳಿದ್ದಾರೆ. ಅದು ಹೌದು. ಶ್ರೀ ಶೇಷಾದ್ರಿಯವರೇ ಕೇರಳದ ಜನತೆ ಧೀರರು, ಅಭಿನಂದನಾರ್ಹರು. ಆದ್ದರಿಂದಲೇ ಕಳೆದ ಲೋಕಸಭಾ ಚುನಾವಣೆಯಲ್ಲೂ ಆನಂತರದ ಎಲ್ಲಾ ಚುನಾವಣೆಗಳಲ್ಲೂ ಇಂದಿರಾ ಕಾಂಗ್ರೆಸ್–ರಾ. ಸ್ವ. ಸೇ. ಸಂಘ-ಕೋಯಾಲೀಗ್ ಕೂಟಕ್ಕೆ ಬಲವಾದ ಸೋಲನ್ನಿತ್ತಿದ್ದಾರೆ. ಇಂ. ಕಾ-ರಾ. ಸ್ವ. ಸೇ., ಕೋಯಾಲೀಗ್-ಕೂಟದ ಎಲ್ಲಾ ಅಪಪ್ರಚಾರಗಳನ್ನು ಇಲ್ಲಿಯವರೆಗೂ ತಿರಸ್ಕರಿಸಿದ ಕೇರಳದ ಧೀರ ಜನತೆ ಮುಂದೆಯೂ ಈ ಪ್ರತಿಗಾಮಿ ಕೂಟದ ಎಲ್ಲಾ ಕುತಂತ್ರಗಳನ್ನು ಸೋಲಿಸುವರೆನ್ನುವುದರಲ್ಲಿ ಸಂಶಯವಿಲ್ಲ.

ಒಂದು ಸುಳ್ಳನ್ನು ನೂರು ಬಾರಿ ಆವರ್ತಿಸುವುದರಿಂದ ಅದನ್ನು ಸತ್ಯವೆಂದು ನಂಬುವಂತೆ ಮಾಡಬಹುದೆಂಬ ಗೋಬೆಲ್ಸ್ ಸಿದ್ಧಾಂತದ ಮೇಲೆ ನಂಬಿಕೆ ಇಟ್ಟು ಆ ತಂತ್ರವನ್ನು ತಾನೂ ಅನುಸರಿಸಿ ಕಮ್ಯುನಿಸ್ಟ್ ಚಳುವಳಿಯ ಬೆಳವಣಿಗೆಯನ್ನು ತಡೆಯಬಹುದೆಂಬ ಭ್ರಮೆ ಶ್ರೀ ಶೇಷಾದ್ರಿಯವರಿಗಿದ್ದರೆ, ತನ್ನದೇ ಆದ ಭ್ರಮೆಯ ಲೋಕದಲ್ಲಿ ಶ್ರೀ ಶೇಷಾದ್ರಿಯವರು ವಿಹರಿಸುತ್ತಿರಲಿ, ಕಮ್ಯುನಿಸ್ಟ್ ಚಳುವಳಿ ಬೆಳೆಯುತ್ತಲೇ ಇರುತ್ತದೆ.

○

ವ್ಯಾಪಾರೀ ಕೇಂದ್ರಗಳಾಗುತ್ತಿರುವ ಶಿಕ್ಷಣ ಸಂಸ್ಥೆಗಳು

ಶೈಕ್ಷಣಿಕ ವರ್ಷ ಪುನರಾರಂಭವಾಗುತ್ತಿರುವ ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದ ವಸೂಲಿ ಮಾಡಲಾಗುತ್ತಿರುವ ಕ್ಯಾಪಿಟೇಶನ್ ಮತ್ತು ಡೊನೇಶನ್ ಶುಲ್ಕಗಳ ಬಗ್ಗೆ ಗಂಭೀರವಾಗಿ ಆಲೋಚಿಸಬೇಕಾಗಿದೆ. ಪ್ರಧಾನಮಂತ್ರಿಯವರು ಕ್ಯಾಪಿಟೇಶನ್ ಫೀ ಪಡೆದು ವೈದ್ಯಕೀಯ ಕಾಲೇಜುಗಳಲ್ಲಿ ಸೀಟುಗಳನ್ನು ಮಾರಲಾಗುತ್ತಿರುವುದನ್ನು "ಅನಾರೋಗ್ಯಕರ ಪದ್ಧತಿ" ಎಂದು ವರ್ಣಿಸಿರುವುದು ಗಮನೀಯ ಅಂಶವಾದರೂ ಬರೇ ಇಂತಹ ಹೇಳಿಕೆಗಳಷ್ಟೇ ಏನನ್ನೂ ಸಾಧಿಸಲಾರದು. ಖಾಸಾಗಿ ವ್ಯಕ್ತಿ, ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕ್ಯಾಪಿಟೇಶನ್ ಫೀ ಹೆಸರಿನಲ್ಲಿ ನಡೆಯುತ್ತಿರುವ ವ್ಯಾಪಾರವನ್ನು ಕೊನೆಗೊಳಿಸುವರೇ ಸರಕಾರ ತೀವ್ರ ಕ್ರಮ ಕೈಗೊಳ್ಳಬೇಕು. ಕಾಂಗ್ರೆ ಪಕ್ಷ ಆಡಳಿತದಲ್ಲಿರುವ ರಾಜ್ಯಗಳಲ್ಲಿ (ಕರ್ನಾಟಕ, ಆಂಧ್ರ ಪ್ರದೇಶ) ಈ ಸುಲಿಗೆ ನಡೆಯುತ್ತಿರುವುದನ್ನು ಪ್ರಧಾನಿಯವರು ಗಮನಿಸಬೇಕು. ಕರ್ನಾಟಕವಂತೂ ಈ ಸುಲಿಗೆಯ ವ್ಯಾಪಾರದಲ್ಲಿ ಪ್ರಥಮ ಸ್ಥಾನವನ್ನು ಪಡೆದಿದೆ. ಬಡಜನರ ಕಲ್ಯಾಣದ ಬಗ್ಗೆ ದಿನನಿತ್ಯ ಭಾಷಣಗಳನ್ನು ಉರುಳಿಸುತ್ತಿರುವ ಮತ್ತು ಅವುಗಳು ಪತ್ರಿಕೆಗಳಲ್ಲಿ ಪ್ರಕಟವಾಗಲಿಲ್ಲನೆಂದು ಪತ್ರಿಕೆಗಳ ಮೇಲೆ ಕೆಂಡಕಾರುವ ಕರ್ನಾಟಕದ ಮಾನ್ಯ ಮುಖ್ಯಮಂತ್ರಿ ಗುಂಡೂರಾಯರು ಕ್ಯಾಪಿಟೇಶನ್ ಫೀ ಪಡೆದು ಸೀಟುಗಳನ್ನು ಮಾರುವ ಮೂರು ಮೆಡಿಕಲ್ ಕಾಲೇಜನ್ನು ಆರಂಭಿಸಲು ಈ ವರ್ಷ ಒಪ್ಪಿಗೆಯನ್ನು ದಯಪಾಲಿಸಿರುವುದು ಯಾವ 'ಬಡ'ಜನರ ಉದ್ಧಾರಕ್ಕೆಂದು ಅವರೇ ಹೇಳಬೇಕು.

ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಶ್ರೀಮಂತರ ಗುತ್ತಿಗೆಯಾಗಿರುವುದಕ್ಕೆ ಮುಖ್ಯ ಕಾರಣ ಕ್ಯಾಪಿಟೇಶನ್ ಶುಲ್ಕ. ಮೆಡಿಕಲ್ ಸೀಟೊಂದಕ್ಕೆ ರೂ. 50 ಸಾವಿರದಿಂದ ರೂ. 1 ಲಕ್ಷ. ಇಂಜಿನಿಯರಿಂಗ್ ಸೀಟಿಗೆ ಕನಿಷ್ಠ ರೂ. 25,000. ಮೂರು ಹೊತ್ತಿನ ಊಟಕ್ಕೇ ಆಕಾಶ ನೋಡುವ ಜನಸಾಮಾನ್ಯರ ಮಕ್ಕಳು (ಅವರೆಷ್ಟೇ ಉತ್ತಮ ಅಂಕಗಳನ್ನು ಪಡೆದರೂ) ಇಷ್ಟು ಮೊತ್ತದ ಹಣ ನೀಡಿ ಸೀಟು ಖರೀದಿಸಲು ಸಾಧ್ಯವೇ? ಲಕ್ಷಾಂತರ ರೂಪಾಯಿ ನೀಡಿ ಡಿಗ್ರಿ ಖರೀದಿಸಿದ ವೈದ್ಯರುಗಳು, ಇಂಜಿನಿಯರುಗಳು ಏನು ಮಾಡುತ್ತಾರೆ? ತಾವು ವ್ಯಯಮಾಡಿದ ಹಣವನ್ನು ಚಕ್ರಬಡ್ಡಿಸಹಿತ ವಸೂಲಿ ಮಾಡಲು ವಿದೇಶಕ್ಕೆ ಹೋಗುತ್ತಾರೆ (ಭಾರತೀಯ ವೈದ್ಯನಿಲ್ಲದ ದೇಶವೇ ಪ್ರಪಂಚದಲ್ಲಿ ಇಂದು ಇಲ್ಲವಂತೆ!). ದೇಶದಲ್ಲಿದ್ದರೂ ಜನರನ್ನು ಸುಲಿಗೆ ಮಾಡುತ್ತಾರೆ. ಇದು ಪರಿಸ್ಥಿತಿ. ಆದ್ದರಿಂದ ಕ್ಯಾಪಿಟೇಶನ್ ಫೀ ಪದ್ಧತಿಯನ್ನು ಕಿತ್ತುಹಾಕಿ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಬೆರಳೆಣಿಕೆಯ ಜನವರ್ಗದ ಸ್ವತ್ತಾಗುವ ಅಪಾಯವನ್ನು ತಪ್ಪಿಸಬೇಕು.

ಹೊಸ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳೇ ಬೇಡವೆನ್ನುವ ಅಪಾಯಕಾರಿ ಘೋಷಣೆಯೂ ಕೆಲವು ವರ್ಗದ ವಿದ್ಯಾರ್ಥಿಗಳ ನಡುವೆ ಕೇಳಿಬರುತ್ತಿದೆ. (ಸರಕಾರವೂ ಕೂಡ ಇದೇ ರೀತಿ ಆಲೋಚಿಸುತ್ತಿರುವಂತೆ ಕಂಡುಬರುತ್ತಿದೆ). ಇದು ಪರಿಸ್ಥಿತಿಯ ಅಸಮರ್ಪಕ ಅಭ್ಯಾಸದ ಫಲ. ಇಂದಿಗೂ ನಮ್ಮ ಸಾವಿರ ಸಾವಿರ ಸಂಖ್ಯೆಯ ಹಳ್ಳಿಗಳಲ್ಲಿ ವೈದ್ಯಕೀಯ ಸೌಲಭ್ಯ ಇಲ್ಲವಾಗಿದೆ. ಹೀಗಿರಲು ಬಹಳಷ್ಟು ಪರಿಣತಿ ಹೊಂದಿದ ವೈದ್ಯರುಗಳ ಅಗತ್ಯತೆ ನಮಗಿದೆ. ಈ ಹಿನ್ನೆಲೆಯಲ್ಲಿ ಹೊಸ ವೈದ್ಯಕೀಯ ಕಾಲೇಜುಗಳ ಆರಂಭ ಅಗತ್ಯ. ಆದರೆ

(7ನೇ ಪುಟ ನೋಡಿ)

ವ್ಯಾಪಾರೀ ಕೇಂದ್ರಗಳಾಗುತ್ತಿರುವ ಶಿಕ್ಷಣ ಸಂಸ್ಥೆಗಳು

(6ನೇ ಪುಟದಿಂದ)

ಈ ಅಗತ್ಯತೆಯ ದುರುಪಯೋಗ ಮಾಡಿಕೊಳ್ಳುವ ಅವಕಾಶ ಶಿಕ್ಷಣದ ಹೆಸರಿನಲ್ಲಿ ವ್ಯಾಪಾರ ಮಾಡುವ ಖಾಸಗಿ ವ್ಯಕ್ತಿ, ಸಂಸ್ಥೆಗಳಿಗೆ ಕೊಡಬಾರದು. ಸರಕಾರವೇ ಸ್ವತಃ ಕ್ಯಾಪಿಟೇಶನ್ ಫೀ ರಹಿತ ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜುಗಳನ್ನು ಆರಂಭಿಸಬೇಕು. ಈಗಿರುವ ಖಾಸಗಿ ಸಂಸ್ಥೆಗಳನ್ನು ರಾಷ್ಟ್ರೀಕರಿಸಬೇಕು.

ಇದಿಷ್ಟು ಉನ್ನತ ಮಟ್ಟದ ಶಿಕ್ಷಣದ ಕಥೆಯಾದರೆ, ಇಂದು ಶಾಲಾ-ಕಾಲೇಜು ಶಿಕ್ಷಣದಲ್ಲೂ ಇದೇ ರೀತಿಯ ಸುಲಿಗೆ ನಡೆಯುತ್ತಿದೆ. ಖಾಸಗಿ ಮೇಲ್ವಿಚಾರಣೆಯ ಶಾಲಾ-ಕಾಲೇಜುಗಳು, ಕಾನ್ವೆಂಟುಗಳು, ಇಂಗ್ಲೀಷ್ ಮಾಧ್ಯಮದ ಶಾಲೆಗಳು ಎಲ್ಲೆಂದರಲ್ಲಿ ನಾಯಿಕೊಡೆಗಳಂತೆ ಹುಟ್ಟಿಕೊಳ್ಳುತ್ತಿವೆ. ಇವುಗಳ ಆಡಳಿತ ವರ್ಗದಲ್ಲಿ ಜನತೆಗೆ ಶಿಕ್ಷಣ ಸೌಲಭ್ಯವನ್ನು ವಿಸ್ತರಿಸುವ ಮನೋಭಾವಕ್ಕಿಂತ ವ್ಯಾಪಾರಿ ಉದ್ದೇಶವೇ ಹೆಚ್ಚು. ದುಬಾರಿ ಫೀ ಮತ್ತು ಖಡ್ಡಾಯ ಡೊನೇಶನ್ ಈ ವಿದ್ಯಾಸಂಸ್ಥೆಗಳ ಲಕ್ಷಣ. ವಾರ್ಷಿಕ ತಲಾ ಕನಿಷ್ಠ ರೂ. 100 ರಿಂದ ರೂ. 500 ರವರೆಗೆ ವಿದ್ಯಾರ್ಥಿಗಳಿಂದ ಡೊನೇಶನ್ ರೂಪದಲ್ಲಿ ವಸೂಲು ಮಾಡುವ ಮೂಲಕ ಈ ಶಾಲಾ – ಕಾಲೇಜುಗಳು ವರ್ಷಕ್ಕೆ ಲಕ್ಷಾಂತರ ರೂಪಾಯಿ ಸಂಪಾದಿಸುತ್ತವೆ. ಶೈಕ್ಷಣಿಕ ಉದ್ದೇಶ ಎನ್ನುವ ಮೂಲಕ ತೆರಿಗೆ ವಿನಾಯಿತಿಯನ್ನು ಪಡೆದುಕೊಳ್ಳುವುದಲ್ಲದೆ ಬಹಳಷ್ಟು ಶಾಲಾ–ಕಾಲೇಜುಗಳು ಸರಿಯಾದ ಲೆಕ್ಕ ಪತ್ರಗಳನ್ನು ಇರಿಸುವುದಿಲ್ಲ. ಯು.ಜಿ.ಸಿ. ಕೊಡುವ ನೆರವನ್ನೂ ಇವರುಗಳು ಪಡೆದುಕೊಳ್ಳುತ್ತಾರೆ. 50 ಶೇಕಡ ಜನ ಬಡತನದ ರೇಖೆಗಿಂತಲೂ ಕೆಳಗಿನ ಜೀವನ ನಡೆಸುತ್ತಿರುವಾಗ ದುಬಾರಿ ಫೀ ಮತ್ತು ಡೊನೇಶನ್ ನೀಡಿ ಖಾಸಗಿ ಶಾಲಾ ಕಾಲೇಜುಗಳಲ್ಲಿ ಓದುವ 'ಭಾಗ್ಯ' ಈ ವರ್ಗದ ಮಕ್ಕಳಿಗೆ ಎಲ್ಲಿಂದ ಬರಬೇಕು? ಸಾಕಷ್ಟು ಸರಕಾರಿ ಶಾಲಾ-ಕಾಲೇಜುಗಳನ್ನು ಆರಂಭಿಸದೆ ಸರಕಾರವು ಪರೋಕ್ಷವಾಗಿ ಖಾಸಗಿ ವ್ಯಕ್ತಿ, ಸಂಸ್ಥೆಗಳಿಗೆ, ಜಾತೀಯ ಮತೀಯ ಸಂಘಗಳಿಗೆ ಶಾಲಾ, ಕಾಲೇಜುಗಳನ್ನು ಆರಂಭಿಸುವ ಮೂಲಕ 'ವ್ಯಾಪಾರ' ನಡೆಸಲು ಅನುವು ಮಾಡಿಕೊಟ್ಟಿದೆ.

ಇಂದು ಉಚಿತ ಮತ್ತು ಖಡ್ಡಾಯ ಶಿಕ್ಷಣವೆಂಬುವುದು ಕೇವಲ ಪೊಳ್ಳು ಘೋಷಣೆಯಾಗಿಯಷ್ಟೇ ಉಳಿದಿದೆ. ಕ್ಯಾಪಿಟೇಶನ್ ಫೀ, ಡೊನೇಶನ್ ಪದ್ಧತಿ ಜೀವಂತವಿರುವ ತನಕ ಶಿಕ್ಷಣ ಎಲ್ಲಾ ಜನಸಮುದಾಯವನ್ನು ತಲುಪಲು ಸಾಧ್ಯವಿಲ್ಲ. ಕೆ. ಎನ್. ರಾಜ್ ಆಯೋಗದ ಶಿಫಾರಸುಗಳನ್ನು (ಕ್ಯಾಪಿಟೇಶನ್ ಫೀ ಪದ್ಧತಿ ನಿಶೇಧಿಸಬೇಕು ಎಂಬ ಶಿಫಾರಸು ಸೇರಿದಂತೆ) ಕರ್ನಾಟಕ ರಾಜ್ಯ ಸರಕಾರ ಇನ್ನೂ ಕಾರ್ಯಾಚರಣೆಗೆ ತಂದಿಲ್ಲ. ವ್ಯಾಪಾರೀಕರಣವಾಗುತ್ತಿರುವ ಶೈಕ್ಷಣಿಕ ಕ್ಷೇತ್ರದ ಬಗ್ಗೆ ಕೇಂದ್ರ ಸರಕಾರ ಗಂಭೀರ ಚಿಂತನೆ ಮಾಡುತ್ತಿಲ್ಲ. ವರ್ಷದಿಂದ ವರ್ಷಕ್ಕೆ ಕೇಂದ್ರವು ಶಿಕ್ಷಣಕ್ಕಾಗಿ ವ್ಯಯಿಸುವ ಹಣದಲ್ಲಿ ಮಾಡುತ್ತಿರುವ ಗಣನೀಯ ಕಡಿತವು ಖಾಸಗಿ ವ್ಯಕ್ತಿಗಳಿಗೆ ಶಿಕ್ಷಣ ಕೇಂದ್ರಗಳನ್ನು ವ್ಯಾಪಾರಿ ಕೇಂದ್ರಗಳನ್ನಾಗಿ ಮಾಡಿ ಹೇರಳ ಹಣ ಸಂಪಾದಿಸಲು ಕುಮ್ಮಕ್ಕು ಕೊಡುತ್ತಿದೆ. ಹೋರಾಟದ ವಿನಃ ನಮ್ಮ ದೇಶದಲ್ಲಿ ಯಾವ ಬದಲಾವಣೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಮೂಲಭೂತ ಬದಲಾವಣೆ ಆಗಬೇಕಿದ್ದಲ್ಲಿ ದೇಶವ್ಯಾಪಿಯಾಗಿ ವಿದ್ಯಾರ್ಥಿ ಸಮುದಾಯ ಸಂಘಟಿತ ಹೋರಾಟ ನಡೆಸಬೇಕಾಗಿದೆ. ●

ಚೀನೀ ವಿವೇಶ ಮಂತ್ರಿಯ ಮುಂಬರುವ ಭೇಟಿಯ ಕುರಿತು

(3ನೇ ಪುಟದಿಂದ)

ಗಳೂ ಸೇರಿದಂತೆ ಪ್ರತಿಯೊಂದು ದೇಶಕ್ಕೂ ಒಂದು ನಿಯಮದಂತೇ ಆಗಿರುವಾಗ ತಮ್ಮನ್ನು ಕಮ್ಯುನಿಸ್ಟರೆಂದು ಕರೆದುಕೊಳ್ಳುವವರು ಸಮಾಜವಾದೀ ಚೀನಾ ಹಾಗೂ ಸ್ವತಂತ್ರ ಭಾರತದ ನಡುವೆ ಸಂಬಂಧಗಳನ್ನು ಸಾಮಾನ್ಯಗೊಳಿಸುವುದನ್ನು ವಿರೋಧಿಸುವುದು ನಿಜವಾಗಿಯೂ ವಿಚಿತ್ರ.

ಹಲವು ದಶಕಗಳ ಕಾಲ ತಮ್ಮ ದೇಶದ ವಿಮೋಚನೆಗಾಗಿ ಹಾಗೂ ಸಮಾಜವಾದೀ ರಚನೆಗೆ ಬುನಾದಿ ಹಾಕಲು ಹೋರಾಡಿದ ಚೀನೀ ಜನತೆ ಹಾಗೂ ಚೀನೀ ಕಮ್ಯುನಿಸ್ಟ್ ಪಕ್ಷ ತಮ್ಮ ಕ್ರಾಂತಿಯ ಸಾಧನೆಗಳನ್ನು ಅಪಾಯಕ್ಕೆ ಸಿಲುಕಿಸುವುದನ್ನು ಸಹಿಸಲಿಕ್ಕಿಲ್ಲ ಎಂದು ದೃಢವಾಗಿ ನಂಬಲು ಹಾಗೂ ಆಶಿಸಲು ಸಿ.ಪಿ.ಐ.(ಎಂ)ಗೆ ಸಾಕಷ್ಟು ಕಾರಣಗಳಿವೆ. ಚೀನೀಯರು ಮತ್ತೆ ಜಾಗೃತರಾಗಿ ತಮ್ಮ ಆಂತರಿಕ ಹಾಗೂ ಬಾಹ್ಯ ಎರಡೂ ಧೋರಣೆಗಳಲ್ಲಿ ಅಗತ್ಯ ಒಪ್ಪುಗಳನ್ನು ಮಾಡುವುದು ಹಾಗೂ ಬಹಳ ಕಷ್ಟಗಳನ್ನನುಭವಿಸಿ ಪಡೆದ ವಿಜಯಗಳನ್ನು ಹಾಗೂ ದೀರ್ಘಕಾಲದಿಂದ ಆಶಿಸಿದ್ದ ಸಮಾಜವಾದ ಹಾಗೂ ಸಮತಾವಾದದ ಗುರಿಗಳನ್ನು ರಕ್ಷಿಸಿಕೊಳ್ಳುವುದು ಖಂಡಿತ.

ಈ ಒಪ್ಪುಗಳು ಚೀನಾದ ಹೊರಗಿನ ಯಾವುದೇ ವ್ಯಕ್ತಿ ಅಥವಾ ಪಕ್ಷದ ಆದೇಶಗಳಿಂದ ಸಾಧ್ಯವಿಲ್ಲ ಎಂಬುದು ನಿಜ. ಅಲ್ಲದೆ ಇಚ್ಛಿಸುವಷ್ಟು ಬೇಗನೆ ಹಾಗೂ ತಕ್ಷಣ ಸಾಧ್ಯವಾಗಲಿಕ್ಕಿಲ್ಲ. ವಿಷಯವನ್ನು ಕೊನೆಗೊಳಿಸುತ್ತಾ ಹೇಳುವುದಾದರೆ ಭಾರತ ಮತ್ತು ಚೀನಾದ ನಡುವಿನ ಸಂಬಂಧಗಳನ್ನು ಸಾಮಾನ್ಯಗೊಳಿಸುವ ವಿಷಯವನ್ನು ಚೀನಾದ ಆಂತರಿಕ ಹಾಗೂ ಬಾಹ್ಯ ಧೋರಣೆಗಳ ಪ್ರಶ್ನೆಯೊಂದಿಗೆ ಅಥವಾ ಈ ಧೋರಣೆಗಳು ಸರಿಯಾದ ಮಾರ್ಕ್ಸ್‌ವಾದೀ-ಲೆನಿನ್‌ವಾದೀ ದಾರಿಯಲ್ಲಿದೆಯೋ, ಅದರಿಂದ ದೂರ ಸರಿದಿದೆಯೋ ಎಂಬುದರೊಂದಿಗೆ ನೇರವಾಗಿ ಜೋಡಿಸುವುದು ಮೂರ್ಖತನದ ಪರಮಾವಧಿ. ●

ಊಜಿ ನೊಣದ ಹಾವಳಿಯನ್ನು ತಡೆಗಟ್ಟಲು ಸರ್ಕಾರದ ನೆರವಿನಿಂದ ಮಾತ್ರ ಸಾಧ್ಯ!

ಈ ಬಗ್ಗೆ ಈಗಾಗಲೇ ಅನೇಕ ಸಲಹೆಗಳು ಇಲಾಖೆ ಮತ್ತು ರೇಷ್ಮೆ ಬೆಳೆಗಾರರ ಮುಂದೆ ಬಂದು ಚರ್ಚೆಗೆ ಅವಕಾಶವಾಗಿರುತ್ತದೆ. ಬಾಗಿಲು ಮತ್ತು ಕಿಟಕಿಗಳಿಗೆ ಬಲೆ ಹಾಕುವುದು, ಮತ್ತು ರೋಗಪೀಡಿತ ಹುಳುಗಳು ಮತ್ತು ನೊಣಗಳನ್ನು ಹಿಡಿದು ಸುಡುವುದು. ಈ ಮಾರ್ಗಗಳನ್ನು ಅನುಸರಿಸಿ, ಸರಿಯಾದ ಫಲಿತಾಂಶ ದೊರೆಯಲಿಲ್ಲ. ಕಾರಣ ಅನೇಕರು ತಾವು ವಾಸಮಾಡುವ ಮನೆಗಳಲ್ಲೇ ಹುಳುಗಳನ್ನು ಸಾಕುವುದು ರೂಢಿಯಾಗಿದೆ. ಇಂಥ ಮನೆಗಳಲ್ಲಿ ಅನೇಕ ಮನೆಗಳಿಗೆ ಇಟ್ಟಿರತಕ್ಕ ಬಾಗಿಲುಗಳು, ಕಿಟಕಿಗಳು, ಗವಾಕ್ಷಿಗಳು ಸುವ್ಯವಸ್ಥಿತವಾದವುಗಳಾಗಿರುವುದಿಲ್ಲ. ಆದಕಾರಣ ನೊಣಗಳು ಒಳಕ್ಕೆ ಬರಲು ಅವಕಾಶವಿರುತ್ತದೆ. ಪ್ರತ್ಯೇಕವಾದ ಮನೆಗಳು ಕಟ್ಟಲು ಬೇಕಾದ ಖಾಲೀ ನಿವೇಶನಾ ವಗೈರೆ ಅಭಾವದಿಂದ ಅನೇಕರು ನಿಸ್ಸಹಾಯಕರಾಗಿರುತ್ತಾರೆಂಬುದನ್ನು ಗಮನದಲ್ಲಿಡಬೇಕು.

ಬಾಗಿಲುಗಳು, ಕಿಟಕಿಗಳು, ಗವಾಕ್ಷಿಗಳು ಸುವ್ಯವಸ್ಥಿತವಾಗಿದ್ದಲ್ಲಿ ನೊಣಗಳು ಹೋಗಲು ಅವಕಾಶವಿರುವುದಿಲ್ಲ. ಆದ್ದರಿಂದ ಪ್ರತಿಯೊಂದು ಗ್ರಾಮದಲ್ಲೂ ಸಾಮೂಹಿಕ ಹುಳು ಸಾಕಾಣಿಕೆಯ ಕೇಂದ್ರಗಳನ್ನು ತೆರೆದು, ಅವುಗಳಲ್ಲಿ ಸಾಕಾಣಿಕೆಯನ್ನು ಕಡ್ಡಾಯವಾಗಿ ಮಾಡಿಸಿದ್ದಲ್ಲಿ ಊಜಿ ಹಾವಳಿಯನ್ನು ತಡೆಗಟ್ಟಲು ಸಾಧ್ಯವಾಗುತ್ತದೆ. [ಪ್ರತಿಯೊಂದು ಗ್ರಾಮದಲ್ಲೂ ಸಾಮೂಹಿಕ ಚಾಕಿ ಸಾಕಾಣಿಕೆ ಕೇಂದ್ರಗಳನ್ನು ತೆರೆದಿರುವಂತೆ].

ರೇಷ್ಮೆ ಇಲಾಖೆಯ ಅಂಕಿ ಅಂಶಗಳ ಪ್ರಕಾರ ಪ್ರತಿಯೊಂದು ಗ್ರಾಮದ ಹಿಪ್ಪೇನೇರಳೆ ಸಾಗುವಳಿ ಪ್ರದೇಶ ಮತ್ತು ಸಾಕತಕ್ಕ ಮೊಟ್ಟೆಯ ಪ್ರಮಾಣದ ಪ್ರಕಾರ ರೇಷ್ಮೆ ಇಲಾಖೆಯವರು ಆ, ಯಾ, ಗ್ರಾಮಕ್ಕೆ ಅನುಗುಣವಾದ ಹುಳು ಸಾಕಾಣಿಕೆಯ ಕೇಂದ್ರದ ಕಟ್ಟಡಗಳನ್ನು ತಯಾರು ಮಾಡಿ ಅಂದರೇ ಊಜಿ ನೊಣದ ಹಾವಳಿಯನ್ನು ತಡೆಗಟ್ಟಲು ಏನೇನು ಕ್ರಮಗಳನ್ನು ಅನುಸರಿಸಬೇಕೋ, ಆ ಕ್ರಮಗಳನ್ನೆಲ್ಲಾ ಅನುಸರಿಸತಕ್ಕದ್ದು ಅವಶ್ಯಕ ಹಾಗೂ ಇದರ ಮೇಲ್ವಿಚಾರಣೆಗಾಗಿ ತಜ್ಞ ಸಿಬ್ಬಂದಿಯನ್ನು ನೇಮಕಮಾಡತಕ್ಕದ್ದೂ ಅವಶ್ಯಕ.

ಈ ವಿಧಾನವನ್ನು ಜಾರಿಗೆ ತರಲು ಆಗತಕ್ಕ ಸಾಧಕ ಬಾಧಕಗಳ ವಿಚಾರವನ್ನು ಪರಿಶೀಲಿಸಿದ್ದಲ್ಲಿ, ಲಕ್ಷಾಂತರ ಜನರಿಗೆ ಜೀವನಾಧಾರವಾಗಿರತಕ್ಕ ಇಡೀ ಕರ್ನಾಟಕದ ಮುಖ್ಯ ಗೃಹ ಕೈಗಾರಿಕೆ ಎನಿಸಿಕೊಂಡಿರುವ ಮತ್ತು ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ಈ ಉದ್ಯಮವು ನೆಲೆಯಾಗಿರಬೇಕಾದರೆ ಇಲಾಖೆ ಮತ್ತು ಸರ್ಕಾರ ಹೆಚ್ಚಿನ ಮುತು ವರ್ಜಿ ವಹಿಸಿ, ತಕ್ಕ ಕಾರ್ಯಕ್ರಮವನ್ನು ತಕ್ಷಣ ಕೈಗೊಳ್ಳಬೇಕಾಗಿರುತ್ತೆ.

ಈ ಒಂದು ಸಾಮೂಹಿಕ ಹುಳು ಸಾಕಾಣಿಕೆಯ ಕೇಂದ್ರಗಳಿಗಾಗಿ ಬೇಕಾದ ಆರ್ಥಿಕವ್ಯವಸ್ಥೆ, ಯಾವುದೇ ಮೂಲದಿಂದ ತಂದು ಒದಗಿಸಿದರೂ, ಇದರಿಂದ ಕೇವಲ ಕೆಲವೇ ವರ್ಷಗಳಲ್ಲಿ ಆ ಒಂದು ಬಂಡವಾಳವನ್ನು ವಾಪಸ್ಸು ಪಡಿಯಲು ಸಾಧ್ಯವಾಗಿರುತ್ತದೆ. ಅಂದರೇ ಸದರಿ ಕೇಂದ್ರಗಳನ್ನು ತೆರೆಯುವುದರಿಂದ, ಆಯಾ ಗ್ರಾಮದ ಹುಳು ಸಾಕಾಣಿಕೆದಾರರು ಅದೇ ಕೇಂದ್ರಗಳಲ್ಲಿ ಸಾಕಾಣಿಕೆಮಾಡಿ ಕೊಡಬೇಕಾದ ಶುಲ್ಕವನ್ನು ಕೊಡಲು ತಕ್ಕ ಅವಕಾಶವಿರುತ್ತದೆ.

ಈ ಸಾಮೂಹಿಕ ಹುಳುಸಾಕಾಣಿಕೆಯ ಕೇಂದ್ರಗಳನ್ನು ನಡೆಸುವುದರಿಂದಲೂ, ಮತ್ತು ಇಲಾಖೆಯ ತಜ್ಞ ಸಿಬ್ಬಂದಿಯ ಮೇಲ್ವಿಚಾರಣೆ ಇರುವುದರಿಂದಲೂ ಈ ಒಂದು ಬೆಳೆಯ ಮೇಲೆ ಬರತಕ್ಕ ಎಲ್ಲಾ ವಿಧವಾದ ರೋಗರುಜಿನಗಳನ್ನು ತಡೆಗಟ್ಟಲು, ಇಲಾಖೆಯವರ ಮೇಲ್ವಿಚಾರಣೆಗೆ ಮತ್ತು ಹತೋಟಿಗೆ ಒಳಪಟ್ಟಿರುತ್ತದೆ. ಆದ್ದರಿಂದ ಸಾಧ್ಯವಾದ ಮಟ್ಟಿಗೂ ಬೆಳೆಯನ್ನು ಹಾಳುಮಾಡಿಕೊಳ್ಳದೇ ರೈತರು ಲಾಭದಾಯಕವಾಗಿ ಬೆಳೆಯನ್ನು ಬೆಳೆಯಲು ಸಾಧ್ಯವಾಗುತ್ತದೆ.

ರೈತರು ಬೆಳೆದ ಗೂಡನ್ನು ಸರ್ಕಾರಿ ಮಾರುಕಟ್ಟೆಗಳಲ್ಲೇ ಮಾರಲು ಸಾಧ್ಯವಾಗಿ ರೈತರು ಅಕ್ರಮ ಮಾರಾಟ ಮಾಡಲು ಅವಕಾಶ ತಪ್ಪುತ್ತದೆ. ಮೇಲ್ಕಂಡ ಸೂಕ್ತ ವಿಧಾನಗಳನ್ನು ಅನುಸರಿಸಿ ಸಾಕಾಣಿಕೆಯನ್ನು ಮಾಡಿದಾಗ ಮಾತ್ರ ಬೆಳೆ ನಾಶವಾಗುವುದನ್ನು ಸಾಧ್ಯವಾದ ಮಟ್ಟಿಗೂ ತಡೆಗಟ್ಟುವುದರಿಂದ ರೈತರಲ್ಲಿ ಬೆಳೆ ಹಾಳಾಗುವುದೆಂಬ ಭೀತಿತಪ್ಪಿ ಹೆಚ್ಚಿನ ಉತ್ಸಾಹ ಮತ್ತು ಪ್ರೋತ್ಸಾಹಗಳಿಂದ ಈ ಬೆಳೆಯನ್ನು ಬೆಳೆಯುವುದರಲ್ಲಿ ಹೆಚ್ಚಿನ ನಂಬಿಕೆಯಿಂದ್ದು, ಈ ಉದ್ಯಮವನ್ನು ಮುಂದುವರಿಸಿಕೊಂಡು ಹೋಗುವುದರಲ್ಲಿ ಸಂಶಯವಿಲ್ಲ.

ಉದಾಹರಣೆಗೆ ವರದನಾಯ್ಕನಹಳ್ಳಿ ಸುಮಾರು 120 ಮನೆಗಳು ಇರುವ ಒಂದು ಗ್ರಾಮ. ಹುಳಸಾಕಾಣಿಕೆ ಪ್ರಮಾಣ 1500 ತಟ್ಟೆ. ಅಂದರೇ 7500 ಮೊಟ್ಟೆ ಪ್ರಮಾಣ ಬೇಕಾಗುತ್ತೆ ಒಂದು ಬೆಳೆಗೆ ಎಂದು ಹೇಳಬಹುದು. ಇದಕ್ಕೆ ಅವಶ್ಯಕವಾದಂತಹ ಹುಳಸಾಕಾಣಿಕೆ ಕೇಂದ್ರದ ಕಟ್ಟಡ ಈ ಗ್ರಾಮಕ್ಕೆ ಬೇಕಾಗಿರುತ್ತೆ. ಅಂದರೇ ಒಂದು ಬೇಚ್‌ಗೆ 500 ತಟ್ಟೆಸಾಕಿದರೇ ಇಂತಹ ಮೂರು ಬೇಚ್‌ನಲ್ಲಿ ಇಡೀ ಗ್ರಾಮದ 1500 ತಟ್ಟೆಹುಳವನ್ನು ಸಾಕಾಣಿಕೆಮಾಡಬಹುದು. ಅಂದರೇ ಒಂದು ಬೇಚ್‌ನಲ್ಲಿ 500 ತಟ್ಟೆ ಸಾಕತಕ್ಕ ವ್ಯವಸ್ಥಿತವಾದ ಕಟ್ಟಡಬೇಕಾಗಿರುತ್ತೆ.

ಒಂದುನೂರು ತಟ್ಟೆ ಸಾಕತಕ್ಕ ವ್ಯವಸ್ಥಿತವಾದ ಕಟ್ಟಡಕ್ಕೆ ಅಂದಾಜು ವೆಚ್ಚ ಮೂವತ್ತು ಸಾವಿರ ರೂಪಾಯಿಗಳು. ಇಂತಹ ಕಟ್ಟಡಗಳು ಐದು. ಒಟ್ಟು ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳು ಕಟ್ಟಡಕ್ಕೆ ಮತ್ತು ಹುಳ ಸಾಕಾಣಿಕೆ ಸಲಕರಣೆಗಳು ಐವತ್ತು ಸಾವಿರ ರೂಪಾಯಿಗಳು. ಅಂದರೇ ಒಟ್ಟು ಎರಡು ಲಕ್ಷ ರೂಪಾಯಿಗಳು ಬಂಡವಾಳ ತೊಡಗಿಸಿದ್ದಾಗ ಹುಳ ಸಾಕಾಣಿಕೆದಾರರು ನೂರು ಮೊಟ್ಟೆ ಸಾಕಾಣಿಕೆಗೆ ಕನಿಷ್ಟ ಐವತ್ತು ರೂಪಾಯಿಗಳು ರೈತರಿಂದ ಸರ್ಕಾರಕ್ಕೆ ಶುಲ್ಕ ಪಾವತಿಯಾಗುತ್ತೆ.

ಆದಕಾರಣ ಇದರ ಮೇಲೆ ತೊಡಗಿಸಿದ ಬಂಡವಾಳ ಕೆಲವೇ ವರ್ಷಗಳಲ್ಲಿ ವಾಪಸ್ಸಾಗಿ ಕಟ್ಟಡವು ಸರ್ಕಾರಕ್ಕೆ ಸ್ಥಿರ ಆಸ್ತಿಆಗಿ ಉಳಿದು, ಈ ಉದ್ಯಮವು ಮುಂದುವರಿಯಲು ಸಾಧ್ಯವಿದೆ.

ಆದ್ದರಿಂದ ಇಲಾಖೆ ಮತ್ತು ಸರ್ಕಾರ ಈ ವಿಧಾನದ ಸಾಮೂಹಿಕ ಹುಳು ಸಾಕಾಣಿಕೆಯ ಕೇಂದ್ರಗಳನ್ನು ಸ್ಥಾಪಿಸತಕ್ಕ ಬಗ್ಗೆ ತಾಂತ್ರಿಕ ತಜ್ಞರ ಸಲಹೆಯನ್ನು ಅನುಸರಿಸಿ, ಕಾರ್ಯಕ್ರಮವನ್ನು ಕೈಗೊಂಡು, ಕರ್ನಾಟಕದ ಆರ್ಥಿಕ ಅಭಿವೃದ್ಧಿಗೆ ಧಕ್ಕೆಯಾಗಿರುವ ಊಜಿ ನೊಣದ ಗಂಡಾಂತರವನ್ನು ತಪ್ಪಿಸಿ, ಈ ಉದ್ಯಮದಲ್ಲಿ ಭಾಗಿಗಳಾಗಿರತಕ್ಕ ಎಲ್ಲಾ ಜನರ ಭವಿಷತ್ತನ್ನು ಕಾಪಾಡಬೇಕು.

—ವಿ. ಮುದ್ದಪ್ಪ

ಖಾನ್ ಹಗರಣ – ತನಿಖೆಗಾಗಿ ಒತ್ತಾಯಿಸಿ ಪ್ರದರ್ಶನ

(1ನೇ ಪುಟದಿಂದ)

ಪಕ್ಷದ ಕಾರ್ಯಕರ್ತರಿಂದ ಪ್ರತಿಭಟನೆ

ಎಫ್. ಎಂ. ಖಾನ್‌ರ ಹೇಯ ವರ್ತನೆ ಬಗ್ಗೆ ವಿವರವಾದ ತನಿಖೆಗಾಗಿ ಒತ್ತಾಯಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯ ಕಾರ್ಯಕರ್ತರು ಸೋಮವಾರ (15-6-81) ಮತಪ್ರದರ್ಶನ ನಡೆಸಿದರು. ಅಂದು ಮೆರವಣಿಗೆಯೊಂದನ್ನು ಹೊರಡಿಸಿ ಐ.ಜಿ.ಪಿ. ಆಫೀಸೆದುರು ಶಾಂತರೀತಿಯಿಂದ ಕಾರ್ಯಕರ್ತರು ಪ್ರದರ್ಶನ ನಡೆಸಿದರು. ಜೆ. ಪಿ. ನಗರ ಠಾಣೆಯ ಪ್ರಕರಣವನ್ನು ಯೋಗ್ಯ ತನಿಖೆಮಾಡುವಂತೆ ಒತ್ತಾಯಿಸುವ ಮನವಿಯೊಂದನ್ನು ಐ.ಜಿ.ಪಿ.ಯವರಿಗೆ ಸಲ್ಲಿಸಲಾಯಿತು.

"ಮಂದಿಸಿದ ಗೂಳಿಯಂತೆ ವರ್ತಿಸುತ್ತಿರುವ ಎಫ್. ಎಂ. ಖಾನ್‌ರ ನಡತೆ ಪ್ರಜ್ಞಾವಂತರು ತಲೆತಗ್ಗಿಸುವಂತಾದ್ದು. ಇತ್ತೀಚೆಗೆ ಮೈಕೋ ಯೂನಿಯನ್ ಕಚೇರಿಯ ಆಕ್ರಮಣ, ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಮುಷ್ಕರದ ಸಂದರ್ಭದಲ್ಲಿ, ಕಾಂಗ್ರೆಸ್ ಕಚೇರಿಯ ಆಕ್ರಮಣದ ಸಂದರ್ಭದಲ್ಲಿ ಈ ಮಹಾಶಯ ವರ್ತಿಸಿದ ರೀತಿ ಜನಮನದಲ್ಲಿ ಹಸಿರಾಗಿದೆ".

"ಕಾನೂನು ಮಾಡುವವರ ಕೈಯಿಂದ ಅನುಚಿತ ವರ್ತನೆಗೆ ಪೋಲೀಸ್ ಅಧಿಕಾರಿಗಳೇ ಈಡಾದದ್ದು ವಿಷಾದನೀಯ. ಅಧಿಕಾರದ ಬಲದ ಮೂಲಕ ಈ ಹೇಯ ಘಟನೆಯನ್ನು ಮುಚ್ಚಿಡಲು ಯತ್ನಿಸುವುದರಿಂದ ಪೋಲೀಸ್ ಇಲಾಖೆಯ ಮೇಲೆ ಜನತೆಗೆ ನಂಬಿಕೆ ಕಡಿಮೆಯಾಗುವದು". ಇದು ಐ.ಜಿ.ಪಿ.ಗೆ ಸಲ್ಲಿಸಿದ ಮನವಿಯ ಸಾರಾಂಶ.

ನಿಜಾಮುದ್ದೀನ್ ಮಧ್ಯ ಪ್ರವೇಶ

ಮನವಿಪತ್ರ ಸಲ್ಲಿಸಲು ಜಿಲ್ಲಾ ಸಮಿತಿಯ ಮುಖಂಡರಾದ ಕಾಂ. ಟಿ. ಎಸ್. ಅನಂತರಾಂ ಮತ್ತಿತರರು ಐ.ಜಿ.ಪಿ.ಯವರಲ್ಲಿಗೆ ತೆರಳಿದಾಗ ಪಕ್ಷದ ಕಾರ್ಯಕರ್ತರು ಐ.ಜಿ.ಪಿ. ಆಫೀಸೆದುರು ಘೋಷಣೆ ಕೂಗುತ್ತಿದ್ದರು. ಈ ಸಮಯಕ್ಕೆ ಐ.ಜಿ.ಪಿ. ಆಫೀಸಿಗೆ ಆಗಮಿಸಿದ್ದ ಕಮೀಷನರ ನಿಜಾಮುದ್ದೀನರು ಈ ಮತಪ್ರದರ್ಶನವನ್ನು ನೋಡಿ ಸ್ಥಿಮಿತ ಕಳೆದುಕೊಂಡರು. ಕಮೀಷನರ್ ಪದವಿಗೆ ಅನರ್ಹವಾಗಿರುವ, (ಈ ಮಹಾಶಯರ ನಡತೆ ಬಗ್ಗೆ ಜೂನ್ 7ರ ಐಕ್ಯರಂಗ ವರದಿ ಮಾಡಿದೆ) ಖಾನ್ ಕೈಯಲ್ಲಿ ಮುಖಕ್ಕೆ ಉಗಿಸಿಕೊಂಡು (ಪತ್ರಿಕಾ ವರದಿ ಪ್ರಕಾರ) ಸುಮನಿದ್ದ ಈ ವ್ಯಕ್ತಿ ಘೋಷಣೆ ಕೂಗುತ್ತಿದ್ದ ಕಾರ್ಯಕರ್ತರ ಬಳಿ ಧಾವಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಲು ತೊಡಗಿದ. ಸೂ...ಮಕ್ಕಳೇ, ಬೋ...ಮಕ್ಕಳೇ, ಹರಾಮ್‌ಜಾದೋ ಮುಂತಾದ ಅಣಿಮುತ್ತುಗಳು ಅವರ ಬಾಯಿಂದ ಹೊರಬಂದವು. ಪಕ್ಕದಲ್ಲಿದ್ದ ಕಿರಿಯ ಅಧಿಕಾರಿಗಳನ್ನುದ್ದೇಶಿಸಿ "ಕತ್ತೆಕಾಯುತ್ತಿದ್ದಿರಾ? ತಕ್ಷಣ ಇವರನ್ನೆಲ್ಲಾ ಬಂಧಿಸಿ" ಎಂದು ಕೂಗಿದ. ಪೋಲೀಸ ಅಧಿಕಾರಿಗಳಿಗೆ ಎಫ್. ಎಂ. ಖಾನ್‌ರಿಂದಾದ ಅಪಮಾನದ ಕುರಿತೇ ಪ್ರತಿಭಟಿಸುತ್ತಿದ್ದ ಕಾರ್ಯಕರ್ತರನ್ನು ಬಂಧಿಸಲು ಕಿರಿಯ ಅಧಿಕಾರಿಗಳು ಹಿಂದೆ ಮುಂದೆ ನೋಡಿದಾಗ ಈ ಉನ್ಮತ್ತ ಕಮೀಷನರ ತಾನೇ ಮುನ್ನುಗ್ಗಿ ಕುಡಿದು ಮತ್ತರಾಗಿ ಅಸಭ್ಯವಾಗಿ ನಡೆದುಕೊಂಡ ಖಾನ್ ಪ್ರಕರಣದ (ಒಬ್ಬ ಮಹಿಳಾ ಕಾರ್ಯಕರ್ತೆಯೂ ಸೇರಿದಂತೆ) ಕೆಲವರನ್ನು ಥಳಿಸಿದ. ನಂತರ ವ್ಯಾನನ್ನು ತರಿಸಿ ಎಲ್ಲ ಕಾರ್ಯಕರ್ತರನ್ನು ಬಂಧಿಸಲಾಯಿತು. ಅಲಸೂರ್‌ಗೇಟ್ ಪೋಲೀಸ್ ಠಾಣೆಗೆ ಕರೆದೊಯ್ಯಲಾಯಿತು. ನಂತರ ರಾತ್ರಿ 11 ಘಂಟೆಗೆ ಬಿಡಲಾಯಿತು.

ನಗರದಲ್ಲಿ ನಡೆಯುತ್ತಿರುವ ಅನೇಕ ದುರ್ಘಟನೆಗಳಿಗೆ ನೇರವಾಗಿ ಪೋಲೀಸ್ ಕಮೀಷನರರೇ ಕಾರಣವಾಗಿರುವುದರಿಂದ ಸರಕಾರ ಕೂಡಲೇ ಅವರ ಸ್ಥಾನದಿಂದ ತೆಗೆದುಹಾಕಬೇಕೆಂದು ಸಿ.ಪಿ.ಐ.(ಎಂ) ಜಿಲ್ಲಾ ಸಮಿತಿ ಒತ್ತಾಯಿಸಿದೆ. ಖಾನ್‌ರಿಗೆ ಸಂಬಂಧಪಟ್ಟ ತನಿಖೆಯಲ್ಲಿ ನಿಜಾಮುದ್ದೀನ್ ಅವರೂ ಭಾಗಿಯಾಗಿರುವುದರಿಂದ, ಇದರ ಬಗ್ಗೆ ತನಿಖೆ ನಡೆಸಲು ನಿಜಾಮುದ್ದೀನರೇ ಎಸ್.ಪಿ. ಹುದ್ದೆಯ ಬ್ಯಾನರ್ಜಿಯವರನ್ನು ತನಿಖೆಗಾಗಿ ನೇಮಿಸಿರುವುದು ಹಾಸ್ಯಾಸ್ಪದ. ಇದರಿಂದ ನಿಜಸಂಗತಿ ಹೊರಬೀಳಲು ಸಾಧ್ಯವಿಲ್ಲವೆಂದು, ಈ ತನಿಖೆ ನ್ಯಾಯಮೂರ್ತಿಯೊಬ್ಬರಿಂದ ಆಗಬೇಕು ಎಂದು ಕಾಂ. ಅನಂತರಾಂ ಒತ್ತಾಯಿಸಿದ್ದಾರೆ.

ಎಂ. ಕೆ. ಯವರ ಹೇಳಿಕೆ

ಖಾನ್ ಪ್ರಕರಣ ಕುರಿತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ಟರು ಹೇಳಿಕೆಯೊಂದನ್ನು ಹೊರಡಿಸಿದ್ದಾರೆ.

"ವಿರೋಧ ಪಕ್ಷಗಳು, ಕಾರ್ಮಿಕ ಸಂಘಗಳು, ಪತ್ರಿಕಾ ಕಾರ್ಯಾಲಯಗಳ ಮೇಲೆ ದಾಳಿ ನಡೆಸುವಂತೆ ಆದೇಶ ನೀಡುತ್ತಿರುವ ಖಾನ್‌ರ ವರ್ತನೆ ಖಂಡನೀಯ. ನಿಜಾಂಶವನ್ನು ಬಯಲುಮಾಡಬೇಕೆಂದು ಪೋಲೀಸ್ ಇಲಾಖೆಗೆ ಒತ್ತಾಯಿಸಿದ್ದಾರೆ. ಹಗರಣವನ್ನು ಪೋಲೀಸರು ಮುಚ್ಚಲು ಯತ್ನಿಸುತ್ತಿರುವುದು ದಿಗ್ಭ್ರಾಂತಿಯನ್ನುಂಟುಮಾಡಿದೆ ಎಂದಿರುವ ಕಾಂ. ಎಂ. ಕೆ. ಅವರು ಖಾನ್ ವಿರುದ್ಧ ಸೂಕ್ತಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

○

ಸಂಪಾದಕೀಯ

(1ನೇ ಪುಟದಿಂದ)

ಯನ್ನು ಉಪಯೋಗಿಸಿ ಹೋರಾಡಿದ್ದರೆ ವಿರೋಧ ಪಕ್ಷಗಳ ಪಾಲಿಗೆ ಇನ್ನೂ ಹೆಚ್ಚಿನ ಮತ ದೊರೆಯುಬಹುದಿತ್ತು. ಆದರೆ ಜನತಾಪಕ್ಷ ಮತ್ತು ಭಾ. ಜ. ಪ.ಗಳು ಕಾಂಗ್ರೆಸ್ ಸವಾಲನ್ನು ಮುಖ್ಯವಾಗಿ ಗಣಿಸದೆ, ಚುನಾವಣಾ ಪ್ರಚಾರದಲ್ಲೂ ತಮ್ಮತಮ್ಮೊಳಗೆ ಮುಖ್ಯ ಪೈಪೋಟಿ ಎಂಬಂತೆ ಪ್ರಚಾರ ನಡೆಸಿರುವುದು, ಪಕ್ಷಾಂತರದ ಗೊಂದಲದಲ್ಲಿರುವ ಕಾಂಗ್ರೆಸ್ (ಯು)ನ ಕೆಲವು ಶಾಸಕರುಗಳು ಕಾಂಗ್ರೆಸ್‌ಗೆ ಬೆಂಬಲ ಸಾರಿದ್ದು-ಈ ಎಲ್ಲ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆದ್ದಿರುವುದಾಗಿದೆ. ಕನಿಷ್ಟ ಇನ್ನಾದರೂ ವಿರೋಧ ಪಕ್ಷಗಳು ಪಾಠಕಲಿತು, ಒಗ್ಗಟ್ಟಿನಿಂದ ಮತ್ತು ಪ್ರಗತಿಶೀಲ ಆರ್ಥಿಕ-ಸಾಮಾಜಿಕ ಧೋರಣೆ ಮತ್ತು ಪ್ರಜಾಸತ್ತಾತ್ಮಕ ಹೋರಾಟಗಳ ಮೂಲಕ ಜನತೆಯ ವಿಶ್ವಾಸಪಡೆದು ಕಾಂಗ್ರೆಸ್ ಸವಾಲನ್ನು ಎದುರಿಸಲು ಮುಂದಾಗಬೇಕು. ಎಡ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಮುನ್ನಡೆದರೆ ಮಾತ್ರ ಇದು ಸಾಧ್ಯ ಎಂಬುದನ್ನು ಪಶ್ಚಿಮ ಬಂಗಾಲವು ಮತ್ತೊಮ್ಮೆ ತೋರಿಸಿಕೊಟ್ಟಿದೆ. ಮುನ್ಸಿಪಲ್ ಚುನಾವಣೆಗಳ ಬೆನ್ನಲ್ಲೆ ನಡೆದಿರುವ ಉಪಚುನಾವಣೆಯ ಫಲಿತಾಂಶ ಪಶ್ಚಿಮ ಬಂಗಾಳದ ಎಡರಂಗ ಸರಕಾರದ ಮೇಲೆ ಜನತೆಗಿರುವ ವಿಶ್ವಾಸ ಕಡಿಮೆಯಾಗುತ್ತಿದೆ ಎಂದು ಸುಳ್ಳು ಪ್ರಚಾರಮಾಡುವವರಿಗೆ ಉತ್ತರ ನೀಡಿದೆ. ಪಶ್ಚಿಮ ಬಂಗಾಳದ ಎಡರಂಗ ಮತ್ತು ಸ್ನೇಹಿತ ಪಕ್ಷಗಳಿಗೆ ಅಭಿನಂದನೆಗಳು. ಪಶ್ಚಿಮ ಬಂಗಾಳದ ಜನತೆಗೆ ಕೆಂಪು ವಂದನೆಗಳು! ●

ಇಂದಿರಾ ಜಯಭೇರಿಗೆ ಎಡಶಕ್ತಿಗಳಿಂದ ತಡೆ

(1ನೇ ಪುಟದಿಂದ)

ಪಶ್ಚಿಮ ಬಂಗಾಲದ ಸೇರಾಮ್‌ಪುರ ಲೋಕಸಭಾ ಕ್ಷೇತ್ರದಲ್ಲಿ ಸಿ. ಪಿ. ಐ.(ಎಂ) ನ ಅಭ್ಯರ್ಥಿ 96.549 ಮತಗಳ ಅಂತರದಿಂದ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿರುವರು. ವಿಧಾನಸಭಾ ಕ್ಷೇತ್ರಗಳ ಫಲಿತಾಂಶ ಪಶ್ಚಿಮ ಬಂಗಾಳದಲ್ಲಿ ಸಿ. ಪಿ. ಐ. (ಎಂ) ಪ್ರಭಾವ ಹೆಚ್ಚಿದೆ ಎಂದು ತೋರಿಸುತ್ತದೆ. ಉದಾ- ಸುಜಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕಳೆದಬಾರಿ ಕಾಂಗ್ರೆಸ್ 33.000 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಗೆದ್ದಿದ್ದರೆ. ಈ ಬಾರಿ ಕೇವಲ 19,000 ಮತಗಳ ಅಂತರದಿಂದ ಗೆದ್ದಿದೆ. ಖರ್ಬಾ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಕಳೆದ ಬಾರಿ (1977) 6,000 ಮತಗಳ ಅಂತರದಿಂದ ಗೆದ್ದರೆ, ಈ ಬಾರಿ ಕೇವಲ 3,400 ಮತಗಳ ಅಂತರದಿಂದ ಗೆದ್ದಿದೆ.

○

ಜಮಾತ್-ಇ-ಇಸ್ಲಾಮಿ–ಮುಸಲ್ಮಾನರಲ್ಲಿ ಆರ್.ಎಸ್.ಎಸ್.ನ ಪಡಿರೂಪ

(2ನೇ ಪುಟದಿಂದ)

ತನ್ನ ಅಧ್ಯಕ್ಷೀಯ ಭಾಷಣದಲ್ಲಿ ಮೌಲಾನಾ ಮೌದೂದಿಯ ಪದಗಳನ್ನೇ ಪುನರುಚ್ಚಿಸಿದ್ದಾನೆ.

ಭಾರತದಲ್ಲಿ ಪ್ರಜಾಪ್ರಭುತ್ವ, ಸಮಾಜವಾದ ಎಂದು ಹೇಳಿಕೊಳ್ಳುವ ಪಕ್ಷಗಳಿಗೆ ಕೊರತೆ ಇಲ್ಲ. ನೀವು ಈ ಪಕ್ಷಗಳೊಂದಿಗೆ ಸಹಕರಿಸಿದರೆ ಈ ಕೆಡಕುಗಳು ತೀವ್ರವಾಗಿ ಹರಡುತ್ತವೆ. ಜಗತ್ತಿಗೆ ಇಂದು ಬೇಕಾಗಿರುವುದು ಈ ಎಲ್ಲ 'ವಾದ'ಗಳಿಗೆ ಪರ್ಯಾಯವಾದ ಜೀವನಕ್ರಮ. ಅಂತಹ ವ್ಯವಸ್ಥೆಯೆಂದರೆ ಸಹಜವಾಗಿ 'ಇಸ್ಲಾಂ' ಒಂದೇ.

ಭಾರತದ ಸಂವಿಧಾನ ಕುರಿತು ತನ್ನ 1960ರ ಡೆಲ್ಲಿ ಸಮ್ಮೇಳನದಲ್ಲಿ ಅದರ ನಾಯಕ ಹೀಗೆ ಹೇಳಿದ್ದಾನೆ- 'ಭಾರತ ಸಂವಿಧಾನದ ಬಗ್ಗೆ ನಮ್ಮ ಮೂಲಭೂತ ಭಿನ್ನಾಭಿಪ್ರಾಯವಿದೆ. ಏಕೆಂದರೆ ದೇವರಿಗೆ ಕೊಡಬೇಕಾದ ಸ್ಥಾನವನ್ನು ಜನತೆಗೆ ನೀಡಲಾಗಿದೆ. ನಮ್ಮ ಅಭಿಪ್ರಾಯದಲ್ಲಿ ಎಲ್ಲ ಕೆಡಕುಗಳಿಗೂ ಇದೇ ಮೂಲ ಕಾರಣವಾಗಿದೆ'.

ಕಮ್ಯುನಿಸಂ ವಿರೋಧಿ

ಧಾರ್ಮಿಕ ಮೂಲ ತತ್ವವನ್ನಾಧರಿಸಿದ ಈ ಎಲ್ಲ ಸಂಘಟನೆಗಳೂ ಕಮ್ಯುನಿಸ್ಟ್ ವಿರೋಧಿಯಾಗಿರುವುದು ಆಕಸ್ಮಿಕವೇನಲ್ಲ. ಸಮಾಜವಾದಿ ವ್ಯವಸ್ಥೆಯಿರುವಲ್ಲಿ ಮುಸಲ್ಮಾನರ ಪ್ರಗತಿಗೆ ಎಲ್ಲ ಅವಕಾಶಗಳು ದೊರೆಯುತ್ತಿವೆಯೆಂಬುದನ್ನು ಜನಗಳು ತಿಳಿಯದಿರುವುದು ಇವರಿಗೆಬೇಕಾಗಿದೆ. ಇಂತಹ ಸರ್ಕಾರಗಳು ಜನರ ಧಾರ್ಮಿಕ ಜೀವನದಲ್ಲಿ ತಲೆಹಾಕುವುದಿಲ್ಲ ಮತ್ತು ಜಾತೀಯ ವೈಷಮ್ಯಗಳನ್ನು ಸಂಪೂರ್ಣವಾಗಿ ತೊಡೆದುಹಾಕುತ್ತವೆ. ನಮ್ಮ ದೇಶದಲ್ಲೇ ಎಲ್ಲೆಲ್ಲಿ ಎಡಶಕ್ತಿಗಳು ಪ್ರಬಲವಾಗಿವೆಯೋ ಮತ್ತು ಎಡ ಪಕ್ಷಗಳ ಸರಕಾರವಿದೆಯೋ ಅಲ್ಲಿ ಅಲ್ಪಸಂಖ್ಯಾತರಿಗೆ ಎಲ್ಲ ರಕ್ಷಣೆ ದೊರೆಯುತ್ತಿದೆ.

ಆದರೆ ಶೋಷಕರಿಗೆ, ಪ್ರತಿಗಾಮಿಗಳಿಗೆ ಜನತೆಯ ಸಮಸ್ಯೆಗಳಿಗೆ ಪರಿಹಾರ ಬೇಕಿಲ್ಲ: ಜನರ ಐಕ್ಯ ಹೋರಾಟಗಳನ್ನು ಮುರಿಯಲು ಧಾರ್ಮಿಕ ಭಾವನೆಗಳನ್ನು ಕೆಣಕುತ್ತಾರೆ. ಮುಸ್ಲಿಂ ಕಾರ್ಮಿಕರ ಶೋಷಣೆ ಮಾಡುತ್ತಿರುವ ಮುಸ್ಲಿಂ ಬಂಡವಾಳ ಭೂಮಾಲೀಕರ ವಿರುದ್ಧ ಜಮಾತ್ ದನಿ ಎತ್ತುವುದಿಲ್ಲ. ಬದಲಾಗಿ ದೇಶ ವಿದೇಶಗಳ ಪ್ರತೀಗಾಮಿ ಜನವಿರೋಧಿ ಶಕ್ತಿಗಳಿಂದ ಬೆಂಬಲ ಪಡೆಯುತ್ತಿದೆ. ಮುಸ್ಲಿಂರ ಸಮಸ್ಯೆಗಳನ್ನು ಮುಂದುಮಾಡಿ ತನ್ನ ಬೇಳೆ ಬೇಯಿಸಿಕೊಳ್ಳುತ್ತಿದೆ.

ವಿನಾಶಕಾರಿ ಪರಿಣಾಮಗಳು

ಮುಸಲ್ಮಾನರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಬೇರೆ ಎಲ್ಲ ಮತೀಯ ದುಡಿಯುವ ವರ್ಗಗಳೊಂದಿಗೆ ಐಕ್ಯ ಹೋರಾಟದಲ್ಲಿ ಭಾಗವಹಿಸಬೇಕಾಗಿದೆ. ಜಮಾತ್‌ನ ಉದ್ದೇಶ ಇಂತಹ ಚಳುವಳಿಗಳಿಂದ ಮುಸ್ಲಿಂರನ್ನು ದೂರ ಇಡುವುದು. ಇದು ಆಳುವ ವರ್ಗಗಳ ಆಶಯಕ್ಕೆ ಅನುಗುಣವಾಗಿದೆ. ಜಾತ್ಯಾತೀತತೆ, ಪ್ರಜಾಪ್ರಭುತ್ವ ಮೌಲ್ಯಗಳನ್ನು ಧ್ವಂಸಗೊಳಿಸುವ ಕೆಲಸವನ್ನು ಜಮಾತ್ ಮಾಡುತ್ತಿದೆ. ಇಂತಹ ಚಟುವಟಿಕೆಗಳು ಕೇವಲ ಮುಸಲ್ಮಾನರಿಗಲ್ಲದೆ ಇಡೀ ದೇಶಕ್ಕೆ ಅಪಾಯಕಾರಿಯಾಗಿವೆ. ಇವು ರಾಷ್ಟ್ರೀಯ ಏಕತೆಯ ಮೂಲಕ್ಕೆ ಕೊಡಲಿ ಪೆಟ್ಟು ಕೊಡುತ್ತದೆ.

ಜಮಾತ್ ಮುಸಲ್ಮಾನರಲ್ಲಿ ಆರ್. ಎಸ್. ಎಸ್.ನ ಪಡಿರೂಪವಾಗಿ ಕೆಲಸ ಮಾಡುತ್ತಿದೆ. ಇವೆರಡರ ಮೂಲ ಸ್ಫೂರ್ತಿಯೂ ಒಂದೇ. ಈ ವಿನಾಶಕಾರಿ ವಿಚಾರಗಳನ್ನು ಈಗಲೇ ಎದುರಿಸದಿದ್ದರೆ ಮುಂದೆ ಪರಿಸ್ಥಿತಿ ಹದಗೆಡುತ್ತದೆ. ದ್ವಿ-ರಾಷ್ಟ್ರ ಸಿದ್ಧಾಂತದಿಂದ ಭಾರತ ಈಗಾಗಲೇ ಅಮಾನುಷ ಮತೀಯ ಘರ್ಷಣೆಗಳಿಗೆ ಒಳಗಾಗಿದೆ. ವಿವಿಧ ಹಣೆಪಟ್ಟಿಯ ಧಾರ್ಮಿಕ ಮೂಲತತ್ವ ಸಂಘಟನೆಗಳಿಂದ ಈ ಸಮಸ್ಯೆಯನ್ನು ನಿರಂತರವಾಗಿ ಎದುರಿಸಬೇಕಾಗಿದೆ.

○

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT